ಸಂಪಾದಕರು :
ಎಂ.ಎಸ್. ವಿಕಾಸ್

ಬುಧವಾರ, ಮೇ 17, 2023
ದಾವಣಗೆರೆ | ಪುಟ : 6 | ರೂ : 5.00
ಸಂಪುಟ : 50 | ಸಂಚಿಕೆ : 03 | RNI : 27369/75

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023

janathavani@mac.com
www.janathavani.com
08192 254736 | 91642 99999



ಮುನ್ನೆಚ್ಚರಿಕೆಯ ಹೃದಯ ತಪಾಸಣೆ ನೀವು ಆರೋಗ್ಯವಾಗಿದ್ದರೂ ಸಹ ಮುಖ್ಯವಾಗಿದೆ
#ಟೇಕ್‌ಕೇರ್
ssims NH
ಸಂಪೂರ್ಣ ಹೃದಯ ತಪಾಸಣೆ ಪ್ಯಾಕೇಜ್ ರೂ. 999/–ಗೆ
7ನೇ ಏಪ್ರಿಲ್ ನಿಂದ 31ನೇ ಮೇ 2023 ರವರೆಗೆ ಮಾನ್ಯವಾಗಿರುತ್ತದೆ । ಬೆಳಿಗ್ಗೆ 9 ರಿಂದ ಸಂಜೆ 5 ರವರೆಗೆ
ನೋಂದಣಿಗಾಗಿ ಕರೆ ಮಾಡಿ:
95380 79876
ಎಸ್‌ಎಸ್ ನಾರಾಯಣ ಹಾರ್ಟ್ ಸೆಂಟರ್, ಎನ್‌ಹೆಚ್–4 ಬೈಪಾಸ್ ರೋಡ್, ದಾವಣಗೆರೆ

## ಲಿಂಗಾಯತರು ಹಿಂದೂಗಳಲ್ಲ ಬಸವ ಅನುಯಾಯಿಗಳು



ಬೆಂಗಳೂರು, ಮೇ 16 - ಹಿಂದುತ್ವ ಹಾಗೂ ಲಿಂಗಾಯತ ಒಂದೇ ಎಂಬುದನ್ನು ಒಪ್ಪುವುದಿಲ್ಲ. ನಾವು ಹಿಂದೂಗಳಲ್ಲ, ಬಸವ ತತ್ವದ ಅನುಯಾಯಿಗಳು ಎಂದು ಅಖಿಲ ಭಾರತ ವೀರಶೈವ ಮಹಾಸಭಾ ಅಧ್ಯಕ್ಷರೂ ಆಗಿರುವ ಶಾಸಕ ಶಾಮನೂರು ಶಿವಶಂಕರಪ್ಪ ಹೇಳಿದ್ದಾರೆ.

ಖಾಸಗಿ ಸುದ್ದಿಸಂಸ್ಥೆಯೊಂದಕ್ಕೆ ಸಂದರ್ಶನ ನೀಡಿದ್ದ ಅವರು, ನಾವು ಬಸವಾನುಯಾಯಿಗಳು. ಬಸವ ತತ್ವ ಪಾಲಿಸುತ್ತೇವೆ, ಹಿಂದೂಗಳಲ್ಲ ಎಂದಿದ್ದಾರೆ.

ಬಿಜೆಪಿಯು ಇತ್ತೀಚೆಗೆ ನಡೆದ ವಿಧಾನಸಭಾ ಚುನಾವಣೆಯಲ್ಲಿ ಹಿಂದುತ್ವವನ್ನು ಮುಂದಿಟ್ಟುಕೊಂಡು ಪ್ರಮುಖ ಅಭಿಯಾನ ನಡೆಸಿತ್ತು. ಲಿಂಗಾಯತ ಹಾಗೂ ಹಿಂದುತ್ವ ಒಂದೇ ಎಂದು ಭಾವಿಸುವಿರಾ? ಎಂಬ ಪ್ರಶ್ನೆಗೆ ಶಿವಶಂಕರಪ್ಪ ಈ ಉತ್ತರ ನೀಡಿದ್ದಾರೆ.

ವೀರಶೈವ ಲಿಂಗಾಯತರನ್ನು ಮುಖ್ಯಮಂತ್ರಿ ಮಾಡುವ ಕುರಿತ ಪ್ರಶ್ನೆಗೆ ಉತ್ತರಿಸಿದ ಅವರು, ಈ ಬಾರಿ ಕಾಂಗ್ರೆಸ್‌ನಲ್ಲಿ 34 ವೀರಶೈವ ಲಿಂಗಾಯತರು ಶಾಸಕರಾಗಿ ಆಯ್ಕೆಯಾಗಿದ್ದಾರೆ. ವೀರಶೈವ ಲಿಂಗಾಯತರಲ್ಲಿ ಸಾಕಷ್ಟು ನಾಯಕರಿದ್ದಾರೆ. ಇವರಲ್ಲಿ ಮುಂದಿನ ಮುಖ್ಯಮಂತ್ರಿ ಆಯ್ಕೆ ಮಾಡಲಿ. ನಾನು ಯಾರ ಹೆಸರನ್ನೂ ಹೇಳುವುದಿಲ್ಲ ಎಂದು ಮತ್ತೊಂದು ಪ್ರಶ್ನೆಗೆ ಉತ್ತರಿಸಿದರು.

ನೀವೇ ಮುಖ್ಯಮಂತ್ರಿ ಆಗಲು ಬಯಸುತ್ತೀರಾ? ಎಂಬ ಪ್ರಶ್ನೆಗೆ ಉತ್ತರಿಸಿರುವ ಎಸ್ಸೆಸ್, ಮುಖ್ಯಮಂತ್ರಿ ಅವಕಾಶ ಕೊಟ್ಟರೆ ಯಾರು ಬೇಡ? ಎನ್ನುತ್ತಾರೆ ಎಂದು ಮರು ಪ್ರಶ್ನಿಸಿದ್ದಾರೆ.

ನನಗೆ ಭ್ರಷ್ಟಾಚಾರ ರಹಿತವಾಗಿ ಆಡಳಿತ ನಡೆಸುವುದು ಗೊತ್ತಿದೆ. ನಾನು ಸಾಕಷ್ಟು ಸಂಸ್ಥೆಗಳನ್ನು ನಡೆಸಿದ್ದೇನೆ. ಆಡಳಿತ ಗೊತ್ತಿದೆ. ನನ್ನ ಇಡೀ ಜೀವನದಲ್ಲಿ ಒಂದು ಭ್ರಷ್ಟಾಚಾರ ಆರೋಪ ಕೇಳಿ ಬಂದಿಲ್ಲ. ಆರು ಬಾರಿ ಶಾಸಕ ಹಾಗೂ ಒಂದು ಬಾರಿ ಸಂಸದನಾಗಿದ್ದೇನೆ. ಮುಖ್ಯಮಂತ್ರಿ ಸ್ಥಾನ ನೀಡಿದರೆ ಆಡಳಿತ ಹಾಗೂ ನಿಯಂತ್ರಣ ಗೊತ್ತಿದೆ ಎಂದರು.

ಬಿಜೆಪಿಯಲ್ಲಿ ಲಿಂಗಾಯತ ನಾಯಕತ್ವ ಕುಸಿದಿದೆಯೇ? ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ಬಿಜೆಪಿಯಿಂದ ಸ್ಪರ್ಧಿಸಿದ ಲಿಂಗಾಯತ ನಾಯಕರು ಸೋತಿದ್ದಾರೆ. ಸೋಮಣ್ಣನವರನ್ನು ಎರಡು ಕ್ಷೇತ್ರಗಳಲ್ಲಿ ಬಿಜೆಪಿ ವರಿಷ್ಠರು ಕಣಕ್ಕಿಳಿಸಿದ್ದರು. ಅವರು ಸೋಲುವುದು ನಿಶ್ಚಿತವಾಗಿತ್ತು. ಪಕ್ಷದಿಂದ ಹೊರ ಹಾಕಲಿಕ್ಕಾಗಿಯೇ ಈ ರೀತಿ ಮಾಡಲಾಗಿದೆ ಎಂದರು.

ಈ ಹಿಂದೆ ಲಿಂಗಾಯತರು ಕಾಂಗ್ರೆಸ್ ಪಕ್ಷಕ್ಕೆ ಬೆಂಬಲಿಸುತ್ತಿದ್ದರು. ಆಗ 90 ಲಿಂಗಾಯತರು ಆಯ್ಕೆಯಾಗುತ್ತಿದ್ದರು. ನಂತರ (3ನೇ ಪುಟಕ್ಕೆ)

## ಮುಖ್ಯಮಂತ್ರಿ ಸ್ಥಾನದ ಬಗ್ಗೆ ರಾಹುಲ್ ಚರ್ಚೆ

### ಸಿದ್ದು, ಡಿಕೆಶಿ ಭೇಟಿ ಮಾಡಿದ ಖರ್ಗೆ



ನವದೆಹಲಿ, ಮೇ 16 – ಮುಖ್ಯಮಂತ್ರಿ ಸ್ಥಾನದ ಆಕಾಂಕ್ಷಿಗಳಾದ ಸಿದ್ದರಾಮಯ್ಯ ಹಾಗೂ ಡಿ.ಕೆ. ಶಿವಕುಮಾರ್ ಅವರು ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಜೊತೆ ಪ್ರತ್ಯೇಕ ಮಾತುಕತೆ ನಡೆಸಿದ್ದಾರೆ.

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಸಹ ಖರ್ಗೆ ನಿವಾಸಕ್ಕೆ ತೆರಳಿ ಸುಮಾರು 90 ನಿಮಿಷಗಳ ಕಾಲ ಸಮಾಲೋಚನೆ ನಡೆಸಿದ್ದಾರೆ. ಕರ್ನಾಟಕದಲ್ಲಿ ಸರ್ಕಾರ ರಚನೆ ಹಾಗೂ ಮುಂದಿನ ಸಂಪುಟ ಸ್ವರೂಪದ ಬಗ್ಗೆ ಸುದೀರ್ಘ ಚರ್ಚೆ ನಡೆಸಲಾಗಿದೆ.

ಖರ್ಗೆ ಹಾಗೂ ರಾಹುಲ್ ಗಾಂಧಿ ಚರ್ಚೆ ವೇಳೆ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸುರ್ಜೇವಾಲ ಹಾಗೂ ಪ್ರಧಾನಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಸಹ ಉಪಸ್ಥಿತರಿದ್ದರು. ವೇಣುಗೋಪಾಲ್ ನಂತರದಲ್ಲಿ ರಾಹುಲ್ ಗಾಂಧಿ ನಿವಾಸಕ್ಕೆ ತೆರಳಿ ಪ್ರತ್ಯೇಕ ಚರ್ಚೆ ನಡೆಸಿದರು.

ಮುಖ್ಯಮಂತ್ರಿ ಸ್ಥಾನದ ಆಯ್ಕೆ ಬಗ್ಗೆ ಉನ್ನತ ನಾಯಕರು ಬಹಿರಂಗವಾಗಿ ಯಾವುದೇ ಹೇಳಿಕೆ ನೀಡಿಲ್ಲ. ಆದರೆ, ಅಂತಿಮ ನಿರ್ಧಾರಕ್ಕೆ ಮುಂಚೆ ಪಕ್ಷದ ನಾಯಕಿ ಸೋನಿಯಾ ಗಾಂಧಿ ಅವರೂ ಚರ್ಚೆ ನಡೆಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಮುಂದಿನ ಮುಖ್ಯಮಂತ್ರಿ ಬಗ್ಗೆ ಒಂದೆರಡು ದಿನಗಳಲ್ಲಿ ನಿರ್ಧರಿಸಲಾಗುವುದು ಎಂದು ಕಾಂಗ್ರೆಸ್ ವಕ್ತಾರ ಪವನ್ ಖೇರಾ ತಿಳಿಸಿದ್ದಾರೆ. ಮುಖ್ಯಮಂತ್ರಿ ಆಯ್ಕೆ ಸುಲಭದ ವಿಷಯವಲ್ಲ. ದೆಹಲಿಯಿಂದ ಈ ನಿರ್ಧಾರ ಹೇರಲಾಗದು. ಪ್ರತಿಯೊಬ್ಬರ ನಿಲುವು ಪಡೆಯಲಾಗುವುದು ಎಂದು ಖೇರ ತಿಳಿಸಿದ್ದಾರೆ.

ಸಿದ್ದರಾಮಯ್ಯ ಅವರು ಸೋಮವಾರದಿಂದಲೇ ದೆಹಲಿಯಲ್ಲಿದ್ದು, ಮಂಗಳವಾರ ಖರ್ಗೆ ಭೇಟಿ ಮಾಡಿದರು. ನಂತರ ಸಿದ್ದರಾಮಯ್ಯ (2ನೇ ಪುಟಕ್ಕೆ)

## ಕಾಂಗ್ರೆಸ್ ಸರ್ಕಾರ ರಚನೆಗೆ ಗುರುವಾರ ಮುಹೂರ್ತ

ಬೆಂಗಳೂರು, ಮೇ 16 - ಸರ್ಕಾರ ರಚನೆಗೆ ಕಾಂಗ್ರೆಸ್ ಮೇ 18 ಗುರುವಾರ ಮುಹೂರ್ತ ನಿಗದಿಪಡಿಸಿದೆ ಎಂದು ಮೂಲಗಳು ತಿಳಿಸಿವೆ.

ಕಳೆದ ಐದು ದಿನಗಳ ಹಿಂದೆ ಸರ್ಕಾರ ರಚನೆಗೆ ರಾಜ್ಯದ ಜನತೆ ಪಕ್ಷಕ್ಕೆ ಪೂರ್ಣ ಬಹುಮತ ನೀಡಿದ್ದರೂ, ನಾಯಕನ ಆಯ್ಕೆ ವರಿಷ್ಠರಿಗೆ ಜಟಿಲವಾಗಿದೆ.

ಇಷ್ಟರ ನಡುವೆ ಗುರುವಾರ ಸರ್ಕಾರ ರಚನೆ ಮಾಡಲೇಬೇಕೆಂದು ತೀರ್ಮಾನಿಸಿರುವ ಕಾಂಗ್ರೆಸ್, ಇದಕ್ಕೆ ಸಿದ್ಧತೆ ಮಾಡಿಕೊಂಡಿದೆ.

ನಾಯಕತ್ವದ ಗೊಂದಲ ಬಗೆಹರಿಸುವ ವಿಶ್ವಾಸದಿಂದ ಸರ್ಕಾರ ರಚನೆಗೆ ಸಮಯ ಮತ್ತು ದಿನಾಂಕವನ್ನು ನಿಗದಿಪಡಿಸಿರುವುದಲ್ಲದೆ, ಪ್ರಮಾಣ ವಚನ ಸ್ವೀಕರಿಸುವ ಸಮಾರಂಭವನ್ನು ರಾಷ್ಟ್ರಮಟ್ಟದಲ್ಲಿ ದೊಡ್ಡ ರಾಜಕೀಯ ಶಕ್ತಿಯನ್ನಾಗಿ ಬಿಂಬಿಸಲು ಪಕ್ಷ ಮುಂದಾಗಿದೆ.

ಈ ಸಮಾರಂಭದಲ್ಲಿ ಕಾಂಗ್ರೆಸ್ ಅಧಿಕಾರದಲ್ಲಿರುವ ಮುಖ್ಯಮಂತ್ರಿಗಳು ಹಾಗೂ ಸೋನಿಯಾಗಾಂಧಿ, ರಾಹುಲ್‌ಗಾಂಧಿ ಹಾಗೂ ಪ್ರಿಯಾಂಕಾ ಗಾಂಧಿ ಸೇರಿದಂತೆ ಪ್ರಮುಖ ಧುರೀಣರು ಭಾಗವಹಿಸಲಿದ್ದಾರೆ.

ವಿಧಾನಸೌಧದ ಮೆಟ್ಟಿಲುಗಳ ಮೇಲೆ ನಡೆಯುವ ಪ್ರಮಾಣ ವಚನ ಸಮಾರಂಭ ಮುಂಬರುವ ಲೋಕಸಭಾ ಚುನಾವಣೆಯ ದಿಕ್ಸೂಚಿಯಾಗಿ ಮಾರ್ಪಡಿಸುವ ಉದ್ದೇಶವೂ ಕಾಂಗ್ರೆಸ್‌ನದ್ದಾಗಿದೆ.

ಸಮಾರಂಭವನ್ನು ಯಶಸ್ವಿಯಾಗಿ ನಡೆಸುವ ಹೊಣೆಯನ್ನು ರಾಜ್ಯ ಉಸ್ತುವಾರಿ (3ನೇ ಪುಟಕ್ಕೆ)

## ಗ್ಯಾರಂಟಿಗಳಿಗೆ 'ಷರತ್ತುಗಳು ಅನ್ವಯ' : ಪರಮೇಶ್ವರ್



ಬೆಂಗಳೂರು, ಮೇ 16 – ಸರ್ಕಾರ ಯಾವುದೇ ಸೌಲಭ್ಯ ಗಳನ್ನು ಸುಮ್ಮನೆ ಷರತ್ತುಗಳಿಲ್ಲದೇ ಕೊಡಲಾಗದು. ಎಲ್ಲದಕ್ಕೂ ಮಾನದಂಡ ಇರುತ್ತದೆ ಎಂದು ಕಾಂಗ್ರೆಸ್ ಹಿರಿಯ ನಾಯಕ ಜಿ. ಪರಮೇಶ್ವರ್ ಹೇಳಿದ್ದಾರೆ.

ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಮೊದಲ ಸಂಪುಟ ಸಭೆಯಲ್ಲೇ ಐದು ಗ್ಯಾರಂಟಿಗಳ ಬಗ್ಗೆ ತೀರ್ಮಾನಿಸುವ ಬಗ್ಗೆ ಬದ್ಧತೆ ಹೊಂದಿದ್ದೇವೆ ಎಂದರು.

200 ಯುನಿಟ್ ಉಚಿತ ವಿದ್ಯುತ್ ನೀಡುವುದನ್ನು ಪ್ರಾಯೋಗಿಕ ವಾಗಿ ಜಾರಿಗೆ ತರುವ ಬಗ್ಗೆ ವಿದ್ಯುತ್ ಸಚಿವರಾಗಲಿರುವವರು ಅಧಿಕಾರಿಗಳ ಜೊತೆ ಚರ್ಚಿಸಿ ನಿರ್ಧರಿಸಲಿದ್ದಾರೆ ಎಂದರು.

ಅದೇ ರೀತಿ 2,000 ರೂ. ಕೊಡುವ ಬಗ್ಗೆಯೂ ಚರ್ಚಿಸಿ ತೀರ್ಮಾನಿಸಲಾಗುವುದು. ಈಗಾಗಲೇ ಹಿರಿಯರಿಗೆ ಪಿಂಚಣಿ ಮತ್ತಿತರೆ ಭತ್ಯೆಗಳನ್ನು ಕೊಡಲಾಗುತ್ತಿದೆ. ಈ ಬಗ್ಗೆಯೂ ಪರಿಶೀಲಿಸಬೇಕಾಗುತ್ತದೆ ಎಂದು ಪರಮೇಶ್ವರ್ ಹೇಳಿದ್ದಾರೆ.

## ಮಾದಿಗ ಸಮಾಜಕ್ಕೆ ಅವಹೇಳನ

### ಶಾಸಕ ಹರೀಶ್ ವಿರುದ್ಧ ಪೊಲೀಸ್ ಠಾಣೆಯಲ್ಲಿ ದೂರು



ಹರಿಹರ, ಮೇ 16 - ಶಾಸಕ ಬಿ.ಪಿ. ಹರೀಶ್ ಮಾದಿಗ ಸಮಾಜದವರಿಗೆ ಅವಹೇಳನಕಾರಿಯಾಗಿ ಮಾತನಾಡಿದ್ದಾರೆ ಎಂದು ಆರೋಪಿಸಿ ಮಾದಿಗ ಸಮಾಜದವರು ಪ್ರತಿಭಟನೆ ಮಾಡಿ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದಾರೆ.

ನಗರದ ಪೌರಕಾರ್ಮಿಕರಾದ ಹುಲುಗಪ್ಪ, ಸದಾಶಿವ, ಪ್ರಭಾಕರ್, ಗುರು ಸೇರಿದಂತೆ ಸುಮಾರು 35ಕ್ಕೂ ಹೆಚ್ಚು ಪೌರ ಕಾರ್ಮಿಕರು ದಾವಣಗೆರೆ ನಗರದ ಕಾಫಿ ಡೇ ಹತ್ತಿರ ಶಾಸಕ ಬಿ.ಪಿ. ಹರೀಶ್ (2ನೇ ಪುಟಕ್ಕೆ)

### ಶಾಸಕ ಹರೀಶ್ ಕ್ಷಮೆಯಾಚನೆ

ಹರಿಹರ, ಮೇ 16- ಮಾದಿಗ ಸಮಾಜಕ್ಕೆ ಅವಹೇಳನ ಮಾಡಿರುವುದಾಗಿ ಸಮಾಜದ ಮುಖಂಡರು ಪ್ರತಿಭಟನೆ ನಡೆಸಿದ್ದ ಹಿನ್ನೆಲೆಯಲ್ಲಿ ಹರಿಹರದ ನೂತನ ಶಾಸಕ ಬಿ.ಪಿ. ಹರೀಶ್ ಇಂದು ಕ್ಷಮೆ ಯಾಚಿಸಿದ್ದಾರೆ.

ಸಮಾಜದ ಬಗ್ಗೆ ಅವಹೇಳನ ಮಾಡಿದ ಕುರಿತು ನಗರ ಠಾಣೆಯಲ್ಲಿ ದೂರು ದಾಖಲಾಗಿತ್ತು. (3ನೇ ಪುಟಕ್ಕೆ)



ಭತ್ತದ ಕಟಾವು .. ದಾವಣಗೆರೆ ಜಿಲ್ಲೆಯ ವಿವಿದೆಡೆ ಬೇಸಿಗೆ ಹಂಗಾಮಿನ ಭತ್ತದ ಕಟಾವು ಭರದಿಂದ ನಡೆಯುತ್ತಿದೆ. ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಕುಂಠಿತಗೊಂಡಿದ್ದ ಕೃಷಿ ಚಟುವಟಿಕೆ ಮತ್ತೆ ಆರಂಭವಾಗಿದೆ.

## ಈ ಬಾರಿ ಮುಂಗಾರು ವಿಳಂಬ

ನವದೆಹಲಿ, ಮೇ 16 – ಈ ಬಾರಿ ಮುಂಗಾರು ಸ್ವಲ್ಪ ವಿಳಂಬವಾಗಲಿದೆ. ಜೂನ್ 4ರಂದು ಮುಂಗಾರು ಮಾರುತಗಳು ಕೇರಳ ತಲುಪಲಿವೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಆದರೆ, ಈ ಕಾರಣದಿಂದ ಮುಂಗಾರಿನ ಬಿತ್ತನೆ ಹಾಗೂ ಒಟ್ಟಾರೆ ಮಳೆಯ ಮೇಲೆ ಯಾವುದೇ ಪರಿಣಾಮವಾಗುವುದಿಲ್ಲ ಎಂದು ಹವಾಮಾನ ಇಲಾಖೆ ತಿಳಿಸಿದೆ. ಸಾಮಾನ್ಯವಾಗಿ ಮುಂಗಾರು ಜೂನ್ 1ರಂದು ಕೇರಳಕ್ಕೆ ತಲುಪುತ್ತದೆ.

ಖಾಸಗಿ ಹವಾಮಾನ ಸಂಸ್ಥೆಯಾದ ಸ್ಕೈಮೆಟ್ ನೀಡಿರುವ (3ನೇ ಪುಟಕ್ಕೆ)

## ಲಿಂಗಾಯತರಿಗೆ ಸಿಎಂ ಸ್ಥಾನಕ್ಕಾಗಿ ಮಹಾಸಭಾ ಒತ್ತಾಯ

### ಮಲ್ಲಿಕಾರ್ಜುನ ಖರ್ಗೆಗೆ ಪತ್ರ ಬರೆದ ಶಾಸಕ ಎಸ್ಸೆಸ್

ಬೆಂಗಳೂರು, ಮೇ 15 – ಕರ್ನಾಟಕದ ಮುಖ್ಯಮಂತ್ರಿ ಸ್ಥಾನವನ್ನು ವೀರಶೈವ ಲಿಂಗಾಯತ ಸಮುದಾಯದ ನಾಯಕರಿಗೆ ನೀಡುವಂತೆ ಅಖಿಲ ಭಾರತ ವೀರಶೈವ ಮಹಾಸಭಾ ಕಾಂಗ್ರೆಸ್ ಪಕ್ಷಕ್ಕೆ ಒತ್ತಾಯಿಸಿದೆ.

ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಪತ್ರ ಬರೆದಿರುವ ಮಹಾಸಭಾ ಅಧ್ಯಕ್ಷ ಹಾಗೂ ಶಾಸಕ ಶಾಮನೂರು ಶಿವಶಂಕರಪ್ಪ, ಸಮುದಾಯದ ಶಾಸಕರಿಗೆ ಸಂಪುಟದಲ್ಲಿ ಸೂಕ್ತ ಸ್ಥಾನಗಳನ್ನು ನೀಡುವಂತೆಯೂ ಒತ್ತಾಯಿಸಿದ್ದಾರೆ.

ಕಾಂಗ್ರೆಸ್ ಪಕ್ಷ 46 ವೀರಶೈವ ಲಿಂಗಾಯತರಿಗೆ ಟಿಕೆಟ್ ನೀಡಿತ್ತು. ಇವರ ಪೈಕಿ 34 ಅಭ್ಯರ್ಥಿಗಳು ಗೆಲುವು ಸಾಧಿಸಿದ್ದಾರೆ. ಕಾಂಗ್ರೆಸ್ ಸ್ಪರ್ಧಿಗಳಲ್ಲಿ ವೀರಶೈವ ಲಿಂಗಾಯತರ ಗೆಲುವಿನ ಪ್ರಮಾಣ ಶೇ.74ರಷ್ಟಿದೆ ಎಂದವರು ತಿಳಿಸಿದ್ದಾರೆ.

ಉಳಿದ 50 ಕ್ಷೇತ್ರಗಳಲ್ಲಿ ಇತರೆ ಸಣ್ಣ ಸಮುದಾಯದವರು ಗೆಲ್ಲುವಂತೆ ಮಾಡುವಲ್ಲಿ ವೀರಶೈವ ಲಿಂಗಾಯತರು ಪ್ರಮುಖ ಪಾತ್ರ ವಹಿಸಿದ್ದಾರೆ. ಸಾಂಪ್ರದಾಯಿಕವಾಗಿ (3ನೇ ಪುಟಕ್ಕೆ)

## ಕಾಂಗ್ರೆಸ್‌ನ ಗ್ಯಾರಂಟಿಗಳು ವಿಫಲವಾಗಲಿವೆ

### ಹರಿಹರದ ಬಿಜೆಪಿ ಕಾರ್ಯಕರ್ತರ ಅಭಿನಂದನಾ ಸಮಾರಂಭದಲ್ಲಿ ಸಂಸದ ಸಿದ್ದೇಶ್ವರ



ಹರಿಹರ, ಮೇ 16 - ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದವರ ಸುಳ್ಳು ಭರವಸೆಯ ಪ್ರಚಾರಕ್ಕೆ ಮತದಾರರು ಮರುಳಾಗಿ ಕಾಂಗ್ರೆಸ್ಸಿಗೆ ಮತ ನೀಡಿದ್ದಾರೆ. ಕಾಂಗ್ರೆಸ್ ಪಕ್ಷದ ಗ್ಯಾರಂಟಿಗಳೆಲ್ಲವೂ ವಾರೆಂಟಿ ಇಲ್ಲದಂತೆ ಆಗಲಿವೆ. ನಮ್ಮ ಕಾರ್ಯಕರ್ತರು ಗ್ಯಾರಂಟಿಗಳ ವೈಫಲ್ಯದ ಬಗ್ಗೆ ಜನರಿಗೆ ಮನವರಿಕೆ ಮಾಡಿಕೊಟ್ಟು ಮುಂಬರುವ ಚುನಾವಣೆಗೆ ಅಸ್ತ್ರವನ್ನಾಗಿಸಿಕೊಳ್ಳ ಬೇಕು ಎಂದು ಸಂಸದ ಜಿ.ಎಂ. ಸಿದ್ದೇಶ್ವರ ಹೇಳಿದರು.

ನಗರದ ಸಿದ್ದೇಶ್ವರ್ ಪ್ಯಾಲೇಸ್ ಸಭಾಂಗಣದಲ್ಲಿ ಇಂದು ನಡೆದ ವಿಜಯೋತ್ಸವ ಸಮಾರಂಭ ಮತ್ತು ಮುಖಂಡರ ಕಾರ್ಯಕರ್ತರ ಅಭಿನಂದನಾ ಸಮಾರಂಭಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಮುಂದಿನ ಎರಡು, ಮೂರು ತಿಂಗಳುಗಳಲ್ಲಿ ಜಿಲ್ಲಾ ಪಂಚಾಯ್ತಿ, ತಾಲ್ಲೂಕು ಪಂಚಾಯ್ತಿಗಳಿಗೆ ಚುನಾವಣೆ ಬರಲಿದೆ. ಒಂದು ವರ್ಷದ ಒಳಗೆ ಲೋಕಸಭಾ ಚುನಾವಣೆ ಬರಲಿದೆ. ಇವೆಲ್ಲವು ಗಳನ್ನು ಗಮನದಲ್ಲಿರಿಸಿಕೊಂಡು ಕಾರ್ಯಕರ್ತರು, ಮುಖಂಡರುಗಳು ಈಗಿನಿಂದಲೇ ಮುಂದಿನ ಸಿದ್ಧತೆಗಳನ್ನು ಮಾಡಿ ಕೊಂಡು ಪಕ್ಷವನ್ನು ಬಲಿಷ್ಠಗೊಳಿಸಬೇಕು ಎಂದು ಸೂಚನೆ ನೀಡಿದರು.

ಶಾಸಕ ಬಿ.ಪಿ. ಹರೀಶ್ ಮಾತನಾಡಿ, ರಾಜ್ಯದಲ್ಲಿ ಯಾರೇ ಮುಖ್ಯಮಂತ್ರಿಯಾಗಲಿ ನಮ್ಮ ಕ್ಷೇತ್ರದಲ್ಲಿರುವ ಮಠಗಳ ಶ್ರೀಗಳ ಆಶೀರ್ವಾದದಿಂದ ಕ್ಷೇತ್ರವನ್ನು ಅಭಿವೃದ್ಧಿಪಡಿಸುವೆ ಎಂದು ಹೇಳಿದರು. ನನ್ನ ಮತ್ತು ಪಕ್ಷದ ಲೆಕ್ಕಾಚಾರದಲ್ಲಿ ನಾವು 20 ಸಾವಿರಕ್ಕೂ ಅಧಿಕ ಮತಗಳ ಅಂತರದಿಂದ ಜಯ ಗಳಿಸಬೇಕಿತ್ತು. ಆದರೆ ಕೆಲವಾರು ತಾಂತ್ರಿಕ ತೊಂದರೆಗಳು ಜೊತೆಗೆ ಪಕ್ಷ ತೆಗೆದುಕೊಂಡ ಹಲವು ನಿರ್ಧಾರಗಳು ಪಕ್ಷಕ್ಕೆ ಮುಳುವಾದವು. ನಮಗೆ ಬರಬೇಕಾಗಿದ್ದ ಸಾಂಪ್ರದಾಯಿಕ ಮತಗಳು ಸಹ ಕೈಕೊಟ್ಟ ಕಾರಣದಿಂದ ನಮ್ಮ ಗೆಲುವಿನ ಅಂತರ ಕಡಿಮೆಯಾಯಿತು ಎಂದು ತಿಳಿಸಿದರು.

ನನಗೆ ಟಿಕೆಟ್ ನೀಡುವ ಸಂದರ್ಭದಲ್ಲಿ ಹಲವಾರು ಕಠಿಣ ಸಂದರ್ಭಗಳು ಎದುರಾದವು. ಕಾವಿ ಬಣ್ಣದ ಪಕ್ಷಕ್ಕೆ ಕಾವಿಯವರಿಂದಲೇ ಅಡ್ಡಿಯಾಯಿತು. ಆದರೆ ದೈವಶಕ್ತಿ ನನ್ನ ಕೈ ಹಿಡಿಯಿತು. ದೈವಶಕ್ತಿಯಿಂದ ನನಗೆ ಟಿಕೆಟ್ ದೊರೆಯಿತು ಮತ್ತು ಅದೇ ಶಕ್ತಿಯಿಂದ ನಾನಿಂದು ಜಯಶಾಲಿಯಾಗಿದ್ದೇನೆ. ಅದೇ ಶಕ್ತಿಯಿಂದ ಕಾವಿಧಾರಿಗಳಿಂದಲೇ ಕ್ಷೇತ್ರದ ಅಭಿವೃದ್ಧಿಯನ್ನು ಮಾಡುವವನಿದ್ದೇನೆ ಎಂದರು. (4ನೇ ಪುಟಕ್ಕೆ)

ದಾವಣಗೆರೆಯ ಜ್ಯೋತಿ ಗ್ಯಾಸ್ ಏಜೆನ್ಸಿ ಮಾಲೀಕರಾದ

## ಅಂದನೂರು ಬಸವರಾಜ್ ನಿಧನ



ದಾವಣಗೆರೆಯ ಜ್ಯೋತಿ ಗ್ಯಾಸ್ ಏಜೆನ್ಸಿ ಮಾಲೀಕರೂ, ದಾವಣಗೆರೆ ಕ್ಲಬ್‌ನ ಮಾಜಿ ಅಧ್ಯಕ್ಷರೂ ಆದ **ಶ್ರೀ ಅಂದನೂರು ಬಸವರಾಜ್** ಅವರು ದಿನಾಂಕ 16-05-2023ರ ಮಂಗಳವಾರ ರಾತ್ರಿ 10.30 ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಸುಮಾರು 79 ವರ್ಷ ವಯಸ್ಸಾಗಿತ್ತು. ಮೃತರು ಓರ್ವ ಪುತ್ರ, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ.

ಮೃತರ ಪಾರ್ಥಿವ ಶರೀರವನ್ನು ದಿನಾಂಕ 17-05-2023ರ ಬುಧವಾರ ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 3 ಗಂಟೆಯವರೆಗೆ ದಾವಣಗೆರೆಯ ಎಸ್.ಎಸ್. 'ಬಿ' ಬ್ಲಾಕ್, 4ನೇ ಮೇನ್, 5ನೇ ಕ್ರಾಸ್, (# 4859) ನೇತಾಜಿ ಇಂಡೋರ್ ಸ್ಟೇಡಿಯಂ ಹತ್ತಿರದಲ್ಲಿರುವ ಅವರ ನಿವಾಸದಲ್ಲಿ ಅಂತಿಮ ದರ್ಶನಕ್ಕೆ ಇರಿಸಲಾಗುವುದು. ನಂತರ ಸಂಜೆ 4 ಗಂಟೆಗೆ ಶ್ಯಾಮನೂರು ಬಳಿ ಇರುವ ವೀರಶೈವ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆಯನ್ನು ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ
ಮೊ. : 98443 06060, 90355 17804

## 3ನೇ ವರ್ಷದ ಪುಣ್ಯಸ್ಮರಣೆ



**ಶ್ರೀಮತಿ ಪಾರ್ವತಿಬಾಯಿ ಕುರ್ಡೇಕರ್ (ಉತ್ತಂಗಿ)**

ನಿಧನ : 19.05.2020


ನೀವು ನಮ್ಮನ್ನಗಲಿ ಇಂದಿಗೆ ಮೂರು ವರ್ಷಗಳಾದವು. ಸದಾ ನಿಮ್ಮ ಸ್ಮರಣೆಯಲ್ಲಿ... ನೀವು ತೋರಿದ ಹಾದಿಯಲ್ಲಿ ಮುನ್ನಡೆಯುತ್ತಿರುವ...

ಪುತ್ರರು, ಪುತ್ರಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು, ಮರಿಮೊಮ್ಮಕ್ಕಳು ಹಾಗೂ ಕುರ್ಡೇಕರ್, ಉತ್ತಂಗಿ ವಂಶಸ್ಥರು

ಉತ್ತಂಗಿ ಜ್ಯುಯಲರ್ಸ್
ದಾವಣಗೆರೆ

# ಹರಿಹರ ಕ್ಷೇತ್ರದಲ್ಲಿ ಶ್ರೀನಿವಾಸ್ ನೇತೃತ್ವದಲ್ಲೇ ಪಕ್ಷದ ಸಂಘಟನೆ

## ಕಾರ್ಯಕರ್ತರ ಸಭೆಯಲ್ಲಿ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಹೆಚ್.ಬಿ. ಮಂಜಪ್ಪ ಘೋಷಣೆ



ಹರಹರ ಮೇ 16- ನಂದಿಗಾವಿ ಶ್ರೀನಿವಾಸ್ ಚುನಾವಣೆಯಲ್ಲಿ ಸೋತಿರಬಹುದು. ಆದರೆ 60 ಸಾವಿರ ಜನರ ಮನಸ್ಸು ಗೆದ್ದಿದ್ದಾರೆ. ಅವರ ನೇತೃತ್ವದಲ್ಲೇ ಹರಿಹರ ಕ್ಷೇತ್ರದ ಕಾಂಗ್ರೆಸ್ ಪಕ್ಷದ ಸಂಘಟನೆ ಸೇರಿದಂತೆ, ಸರ್ಕಾರದ ಮಟ್ಟದಲ್ಲಿ ಕೆಲಸಗಳು ನಡೆಯಲಿವೆ ಎಂದು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್.ಬಿ.ಮಂಜಪ್ಪ ತಿಳಿಸಿದ್ದಾರೆ.

ಅವರು ಮಂಗಳವಾರ ಸಂಜೆ ಹರಿಹರದ ಹೆಚ್.ಕೆ. ವೀರಪ್ಪ ಕಲ್ಯಾಣ ಮಂಟಪದಲ್ಲಿ ಮಲೇಬೆನ್ನೂರು ಮತ್ತು ಹರಿಹರ ಬ್ಲಾಕ್ ಕಾಂಗ್ರೆಸ್ ಸಮಿತಿಗಳ ವತಿಯಿಂದ ಹಮ್ಮಿಕೊಂಡಿದ್ದ ಹರಿಹರ ತಾಲ್ಲೂಕು ಕಾಂಗ್ರೆಸ್ ಮುಖಂಡರ, ಕಾರ್ಯಕರ್ತರ ಮತ್ತು ಅಭಿಮಾನಿಗಳ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ವಿಧಾನಸಭಾ ಚುನಾವಣೆಯಲ್ಲಿ ಪಕ್ಷದ ಪರವಾಗಿ ಮತ್ತು ಪಕ್ಷದ ವಿರುದ್ಧವಾಗಿ ಯಾರ್‍ಯಾರು ಕೆಲಸ ಮಾಡಿದ್ದಾರೆಂಬ ಬಗ್ಗೆ ಕೆಪಿಸಿಸಿಗೆ ಮಾಹಿತಿ ಇದೆ. ಅಂತಹವರ ವಿರುದ್ಧ ಪಕ್ಷ ಶಿಸ್ತು ಕ್ರಮ ಕೈಗೊಳ್ಳಲಿದೆ ಎಂದು ಮಂಜಪ್ಪ ಹೇಳಿದರು.

ನಾನು ಸಹ ಹೊನ್ನಾಳಿ ಕ್ಷೇತ್ರದ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಯಾಗಿದ್ದೆ. ಆದರೆ ಪಕ್ಷ ನನಗೆ ಟಿಕೆಟ್ ನೀಡಲಿಲ್ಲ. ಪಕ್ಷದ ಟಿಕೆಟ್ ಪಡೆದ ಶಾಂತನಗೌಡ ಪರ ಕೆಲಸ ಮಾಡಿ, ಅವರ ಗೆಲುವಿಗೆ ಶ್ರಮಿಸಿದ್ದೇನೆ. ಇಲ್ಲಿಯೂ ಸಹ ಟಿಕೆಟ್ ಸಿಗದ ಕೆಲವರು ಏನು ಮಾಡಿದ್ದಾರೆ ಎಂಬ ಬಗ್ಗೆ ನಮಗೂ ಮಾಹಿತಿ ಇದೆ. ಜಿಲ್ಲೆಯಲ್ಲಿ 6 ಕಡೆ ಕಾಂಗ್ರೆಸ್ ಗೆದ್ದು, ಹರಿಹರದಲ್ಲಿ ಮಾತ್ರ ಸೋತಿರುವುದಕ್ಕೆ ಎಲ್ಲರಿಗೂ ತುಂಬಾ ಬೇಸರವಿದೆ.

ಮುಖ್ಯಮಂತ್ರಿ ಯಾರೇ ಆಗಲಿ ಅವರ ಬಳಿ ಶ್ರೀನಿವಾಸ್ ನೇರವಾಗಿ ಹೋಗಿ ಬರಲು ಅವಕಾಶ ಮಾಡಿಕೊಡುತ್ತೇವೆ. ಅಷ್ಟೇ ಅಲ್ಲ, ಅವರಿಗೆ ನಿಗಮ -ಮಂಡಳಿ ಅಧ್ಯಕ್ಷ ಸ್ಥಾನ ಕೊಡಿಸುವ ಬಗ್ಗೆಯೂ ಪ್ರಯತ್ನ ಮಾಡುತ್ತೇವೆ. ಎಸ್.ಎಸ್. ಮಲ್ಲಿಕಾರ್ಜುನ್ ಅವರು ಜಿಲ್ಲಾ ಮಂತ್ರಿಗಳಾಗಲಿದ್ದು, ನಿಮ್ಮ ಎಲ್ಲಾ ಕೆಲಸಗಳನ್ನು ಅವರಿಂದ ಮಾಡಿಸುತ್ತೇವೆ ಎಂದು ಮಂಜಪ್ಪ ಭರವಸೆ ನೀಡಿದರು.

ಮುಂಬರುವ ಜಿ.ಪಂ., ತಾ.ಪಂ. ಸೇರಿದಂತೆ ಲೋಕಸಭಾ ಚುನಾವಣೆಯನ್ನು ಹರಿಹರ ಕ್ಷೇತ್ರದಲ್ಲಿ ಶ್ರೀನಿವಾಸ್ ಅವರ ನೇತೃತ್ವದಲ್ಲೇ ನಡೆಸಲಾಗುವುದು. ಮುಂದೊಂದು ದಿನ ಶ್ರೀನಿವಾಸ್ ಶಾಸಕರಾಗುವುದು ನಿಶ್ಚಿತ ಎಂದು ಕಾಂಗ್ರೆಸ್ ಕಾರ್ಯಕರ್ತರನ್ನು ಮಂಜಪ್ಪ ಹುರಿದುಂಬಿಸಿದರು.

ನಂದಿಗಾವಿ ಶ್ರೀನಿವಾಸ್ ಮಾತನಾಡಿ ನಾನು ಸೋಲಿನಿಂದ ಧೃತಿಗೆಟ್ಟಿಲ್ಲ. ನೀವು ಧೃತಿಗೆಡಬೇಡಿ. ಕೇವಲ 15 ದಿನಗಳಲ್ಲಿ ಸುಮಾರು 60 ಸಾವಿರ ಜನ ಮತದಾರರು ನನ್ನನ್ನು ಬೆಂಬಲಿಸಿದ್ದಾರೆ. ಇನ್ನೆರಡೇ ದಿನ ಸಮಯ ಸಿಕ್ಕಿದ್ದರೆ 10 ಸಾವಿರ ಮತಗಳ ಅಂತರದಲ್ಲಿ ಗೆಲ್ಲುತ್ತಿದ್ದೆವು ಎಂದು ಅಭಿಪ್ರಾಯ ಪಟ್ಟರು.

ಕೆಪಿಸಿಸಿ ಸದಸ್ಯ ಕೆ. ರೇವಣಸಿದ್ದಪ್ಪ, ಹರಿಹರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಲ್.ಬಿ. ಹನುಮಂತಪ್ಪ, ಕುಂಬಳೂರು ವಿರೂಪಾಕ್ಷಪ್ಪ, ಎಸ್.ಜಿ. ಪರಮೇಶ್ವರಪ್ಪ, ಜಿ. ಮಂಜುನಾಥ್ ಪಟೇಲ್, ಸಿರಿಗೆರೆ ರಾಜಣ್ಣ, ಜಿಗಳಿ ಆನಂದಪ್ಪ, ಭಾನುವಳ್ಳಿ ಪುಟ್ಟಪ್ಪ, ಬೆಳ್ಳೂಡಿ ದುಂಡಿ ಸಿದ್ದೇಶ್, ಹನಗವಾಡಿ ಕುಮಾರ್, ಗೋವಿನಹಾಳ್ ರಾಜಣ್ಣ, ಆದಾಪುರದ ವೀರಭದ್ರಪ್ಪ, ಸಿಗ್ಬತ್ತುಲ್ಲಾ, ಎಂ. ಎಸ್. ಬಾಬುಲಾಲ್, ಬಿ.ಕೆ. ಸೈಯದ್ ಎಜಾಜ್, ಸೈಯದ್ ಜಾಕೀರ್, ಬಿ. ಮುಗ್ದಂ, ಕಿರಣ್ ಭೂತೆ, ಹರಳಹಳ್ಳಿ ಮಂಜು, ಬೆಳ್ಳೂಡಿ ಕೃಷ್ಣಮೂರ್ತಿ, ಎಳೆಹೊಳೆ ಕರಿಬಸಪ್ಪ, ಕಮಲಾಪುರದ ಮಲ್ಲೇಶ್, ಮೀರ್ ಆಜಾಂ, ಸವಿತಾ ನಾಯ್ಕ, ಇನ್ನೂ ಅನೇಕರು ಮಾತಾನಾಡಿ, ಶ್ರೀನಿವಾಸ್ ಸೋಲಿನ ಬಗ್ಗೆ ಆತ್ಮಾವಲೋಕನ ಮಾಡಿದರು. ಅಧಿಕಾರದಲ್ಲಿದ್ದ ಪಕ್ಷಕ್ಕೆ ಮೋಸ ಮಾಡಿದವರ ನಡೆಯನ್ನು ಖಂಡಿಸಿದರು.

ಹಿರಿಯರಾದ ಎಂ. ಬಸಪ್ಪ, ಕೃಷ್ಣಾ ಸಾ ಭೂತೆ, ಕೆ. ಜಡಿಯಪ್ಪ, ಹಂಚಿನ ನಾಗಣ್ಣ, ಮಲೇಬೆನ್ನೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಬಿ. ಅಬೀದ್ ಅಲಿ, ಗುಬ್ಬಿ ರಂಗನಾಥ್, ವಾಸನ ಮಂಜಣ್ಣ, ಕುಣೆಬೆಳಕೆರೆ ರುದ್ರಪ್ಪ, ಪೂಜಾರ್ ಹಾಲೇಶಪ್ಪ, ಕೆ.ಪಿ. ಗಂಗಾಧರ್, ಕೆ.ಜಿ. ಲೋಕೇಶ್, ಚಿಟ್ಟಕ್ಕಿ ನಾಗರಾಜ್, ಸಾಬೀರ್ ಅಲಿ, ಎಂ.ಬಿ. ಫೈಜು, ಎ. ಆರೀಫ್ ಅಲಿ, ಷಾ ಅಬ್ರಾರ್, ನಯಾಜ್, ಭೋವಿ ಶಿವು, ಭೋವಿ ಕುಮಾರ್, ಪಿ.ಹೆಚ್. ಶಿವಕುಮಾರ್, ಕುಂಬಳೂರು ವಾಸು, ಕೊಕ್ಕನೂರು ಸೋಮಶೇಖರ್, ಬನ್ನಿಕೋಡು ರೇವಣಸಿದ್ದಪ್ಪ, ಕೊಮಾರನಹಳ್ಳಿಯ ಎಸ್.ಎಂ. ಮಂಜುನಾಥ್ ಸೇರಿದಂತೆ ಇನ್ನೂ ಅನೇಕರು ಸಭೆಯಲ್ಲಿದ್ದರು.

# ಪ್ರಧಾನಿ ಉದ್ಯೋಗ ಮೇಳಕ್ಕೆ ಕಾಂಗ್ರೆಸ್ ತರಾಟೆ

ನವದೆಹಲಿ, ಮೇ 16 – ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಉದ್ಯೋಗ ಮೇಳ ಆಯೋಜಿಸಿರುವುದನ್ನು ಟೀಕಿಸಿ ರುವ ಕಾಂಗ್ರೆಸ್, ಆಡಳಿತವನ್ನು ವೈಯಕ್ತೀಕರಣಗೊಳಿಸುವ ಮೂಲಕ ನಾಶಗೊಳಿಸಲಾಗುತ್ತಿದೆ ಎಂದು ಹೇಳಿದೆ.

ಪ್ರಧಾನಿ ಮೋದಿ ಅವರು ಉದ್ಯೋಗ ಮೇಳದ ಮೂಲಕ 71 ಸಾವಿರ ಜನರಿಗೆ ನೇಮಕಾತಿ ಪತ್ರಗಳನ್ನು ವಿತರಿಸಿದ್ದರು.

ಈ ಬಗ್ಗೆ ಹೇಳಿಕೆ ನೀಡಿರುವ ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಪ್ರತಿ ವರ್ಷ 2 ಕೋಟಿ ಉದ್ಯೋಗ ಒದಗಿಸುವುದಾಗಿ ಪ್ರಧಾನಿ ಮೋದಿ ಭರವಸೆ ನೀಡಿದ್ದರು. ಕಳೆದ ಒಂಭತ್ತು ವರ್ಷಗಳಲ್ಲಿ 18 ಕೋಟಿ ಯುವಕರ ಕನಸುಗಳು ನಾಶವಾಗಿವೆ. ಸರ್ಕಾರದ ವಿವಿಧ ಇಲಾಖೆಗಳಲ್ಲಿ 30 ಲಕ್ಷ ಉದ್ಯೋಗಗಳು ಖಾಲಿ ಇವೆ. ಅವರು ಕೇವಲ 71 ಸಾವಿರ ನೇಮಕಾತಿ ಪತ್ರಗಳನ್ನು ವಿತರಿಸುತ್ತಿದ್ದಾರೆ ಎಂದರು.

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಅವರು ಉದ್ಯೋಗ ಮೇಳವನ್ನು ಟೀಕಿಸಿದ್ದು, ಹಿಂದೆಂದೂ ಈ ರೀತಿ ಆಡಳಿತವನ್ನು ವೈಯಕ್ತೀಕರಣ ಗೊಳಿಸಿರಲಿಲ್ಲ. ಆಡಳಿತವನ್ನು ಮೋದಿ ನಾಶಗೊಳಿಸುತ್ತಿದ್ದಾರೆ ಎಂದು ಹೇಳಿದರು.

ಮಂಗಳವಾರ ಉದ್ಯೋಗ ಮೇಳದಲ್ಲಿ ಮಾತನಾಡಿದ್ದ ಪ್ರಧಾನಿ ಮೋದಿ, ಸರ್ಕಾರ ನೇಮಕಾತಿ ಪ್ರಕ್ರಿಯೆಯಲ್ಲಿ ಭ್ರಷ್ಟಾಚಾರ ಹಾಗೂ ಪಕ್ಷಪಾತವನ್ನು ನಿವಾರಿಸಿದೆ ಎಂದಿದ್ದರು. ಈ ಮೇಳದ ಮೂಲಕ ಅವರು 71 ಸಾವಿರ ಜನರಿಗೆ ನೇಮಕಾತಿ ಪತ್ರ ವಿತರಿಸಿದ್ದರು.

ಉದ್ಯೋಗಕ್ಕೆ ಅರ್ಜಿ ಸಲ್ಲಿಸುವುದರಿಂದ ಹಿಡಿದು ಫಲಿತಾಂಶ ಘೋಷಣೆಯವರೆಗೆ ಎಲ್ಲ ಪ್ರಕ್ರಿಯೆ ಆನ್‌ಲೈನ್ ಮೂಲಕ ನಡೆದಿದೆ. ಕಳೆದ ಒಂಭತ್ತು ವರ್ಷಗಳ ಬಿಜೆಪಿ ಆಡಳಿತದಲ್ಲಿ ಉದ್ಯೋಗಕ್ಕೆ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲಾಗಿದೆ ಎಂದಿದ್ದರು.

# ಉಪನಯನ, ಸಾಮೂಹಿಕ ವಿವಾಹ

ದಾವಣಗೆರೆ, ಮೇ 16 - ವಿಶ್ವಕರ್ಮ ಸಮಾಜ ಸಂಘ ಹಾಗೂ ಜಿಲ್ಲೆ ವಿಶ್ವಕರ್ಮ ಸಮಾಜದ ಎಲ್ಲಾ ಸಂಘ-ಸಂಸ್ಥೆಗಳ ಸಹಯೋಗದೊಂದಿಗೆ 40ನೇ ವರ್ಷದ ಸಾಮೂಹಿಕ ಉಪನಯನ ಮತ್ತು ವಿವಾಹ ಮಹೋತ್ಸವ ಸಮಾರಂಭವು ಇದೇ ದಿನಾಂಕ 21 ರಂದು ನಗರದ ಶ್ರೀ ಕಾಳಿಕಾಂಬ ವಿಶ್ವಕರ್ಮ ಕಲ್ಯಾಣ ಮಂಟಪದಲ್ಲಿ ನಡೆಯಲಿದೆ ಎಂದು ಅಧ್ಯಕ್ಷ ಬಸಾಪುರದ ನಾಗೇಂದ್ರಾಚಾರ್ (9448127640), ವಿ.ಎಂ. ಕೊಟ್ರೇಶಾಚಾರ್ (9731870799) ತಿಳಿಸಿದ್ದಾರೆ.

## ಎಲ್.ಜಿ ಅಮೃತಪ್ಪ ನಿಧನ



ದಾವಣಗೆರೆ ಸಿಟಿ ಡಿಸಿಎಂ ಲೇಔಟ್ ವಾಸಿ ಮೆಕ್ಕೆಜೋಳ ವರ್ತಕರಾದ

**ಎಲ್.ಜಿ ಅಮೃತಪ್ಪ**

ಇವರು, ದಿನಾಂಕ 16.05.2023ರ ಮಂಗಳವಾರ ಬೆಳಿಗ್ಗೆ 7.30 ಕ್ಕೆ ನಿಧನರಾಗಿರುತ್ತಾರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 77 ವರ್ಷ ವಯಸ್ಸಾಗಿತ್ತು.

ಪತ್ನಿ, ಇಬ್ಬರು ಪುತ್ರರು, ಮೂವರು ಪುತ್ರಿಯರು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 16.05.2023 ನೇ ಮಂಗಳವಾರ ನಗರದ ವೀರಶೈವ ರುದ್ರಭೂಮಿಯಲ್ಲಿ ನೆರವೇರಿತು.

ದುಃಖತಪ್ತ ಕುಟುಂಬ ವರ್ಗದವರು, ಮೊ : 99725 61470

## ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ



ಹರಿಹರ ತಾಲ್ಲೂಕು ಬೂದಿಹಾಳ್ ಗ್ರಾಮದ ವಾಸಿ

**ಮೂಲೇರ ಶ್ರೀಮತಿ ದೇವಮ್ಮ ಮತ್ತು ಸಹೋದರಿಯರು**

ಮಾಡುವ ವಿಜ್ಞಾಪನೆಗಳು.

ದಿನಾಂಕ 9.5.2023ನೇ ಮಂಗಳವಾರ ರಾತ್ರಿ 11.45ಕ್ಕೆ ನಮ್ಮ ಪೂಜ್ಯ ತಾಯಿಯವರಾದ

**ಶಾಮನೂರು ಸಣ್ಣಗೌಡ್ರ ಶ್ರೀಮತಿ ಪಾರ್ವತಮ್ಮ**

ಇವರು ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

**ಶಿವಗಣಾರಾಧನೆ**ಯನ್ನು ದಿನಾಂಕ 17.5.2023ನೇ ಬುಧವಾರ ಬೆಳಿಗ್ಗೆ 10.30ಕ್ಕೆ ಬೂದಿಹಾಳ್ ಗ್ರಾಮದಲ್ಲಿರುವ ಮೂಲೇರ ಶ್ರೀಮತಿ ದೇವಮ್ಮನವರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ, ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ದುಃಖತಪ್ತರು : ಮೂಲೇರ ಶ್ರೀಮತಿ ದೇವಮ್ಮ ಕೋಂ. ದಿ. ಶೇಖರಪ್ಪ

ಶ್ರೀಮತಿ ಹೇಮಲತಾ ಶ್ರೀ ಹನುಮೇಶ್,

ಸಣ್ಣಗೌಡ್ರ ವಂಶಸ್ಥರು, ಶಾಮನೂರು ಹಾಗೂ ಬಂಧು-ಮಿತ್ರರು.

ಮೊಬೈಲ್ : 98447 29809, 94487 28793, 9481161071

# ಸತೀಶ್ ಜಾರಕಿಹೊಳಿ ಡಿಸಿಎಂ ಮಾಡಲು ಒತ್ತಾಯ



**ಹರಪನಹಳ್ಳಿ**

ಹರಪನಹಳ್ಳಿ, ಮೇ 16- ಸತೀಶ್ ಜಾರಕಿಹೊಳಿಯವರಿಗೆ ಉಪ ಮುಖ್ಯಮಂತ್ರಿ ಸ್ಥಾನ ನೀಡಬೇಕು ಎಂದು ತಾಲ್ಲೂಕು ವಾಲ್ಮೀಕಿ ನಾಯಕ ಸಂಘ, ತಾಲ್ಲೂಕು ವಾಲ್ಮೀಕಿ ನಾಯಕ ಮಹಿಳಾ ಘಟಕ ಹಾಗೂ ಏಕಲವ್ಯ ಸಂಘರ್ಷ ಸಮಿತಿ ಒತ್ತಾಯಿಸಿವೆ.

ಈ ವೇಳೆ ತಾಲ್ಲೂಕು ವಾಲ್ಮೀಕಿ ನಾಯಕ ಸಂಘದ ಅಧ್ಯಕ್ಷ ಕೆ. ಉಚ್ಚಂಗೆಪ್ಪ ಪತ್ರಿಕಾ ಹೇಳಿಕೆ ನೀಡಿ, ರಾಜ್ಯದಲ್ಲಿ ವಾಲ್ಮೀಕಿ ನಾಯಕ ಸಮಾಜದ 18 ಜನ ಶಾಸಕರು ಜಯಶಾಲಿಗಳಾಗಿದ್ದು, ಅದರಲ್ಲಿ 15 ಜನ ಶಾಸಕರು ಕಾಂಗ್ರೆಸ್ ಪಕ್ಷದಿಂದ ಗೆದ್ದಿದ್ದಾರೆ. ಕಾಂಗ್ರೆಸ್ ಪ್ರಭಾವಿ ಮುಖಂಡರಾದ ಸತೀಶ್ ಜಾರಕಿಹೊಳಿ ಅವರು ಬುದ್ಧ-ಬಸವ-ಅಂಬೇಡ್ಕರ್ ಅವರ ಅನುಯಾಯಿಗಳಾಗಿದ್ದು, ಸಮಾಜದಲ್ಲಿರುವ ಮೂಢನಂಬಿಕೆ, ಕಂದಾಚಾರ ತೊಲಗಿಸಲು ನಿರಂತರ ಹೋರಾಟ ಮಾಡುತ್ತಿದ್ದಾರೆ.

ವಾಲ್ಮೀಕಿ ಜಾತ್ರಾ ಸಮಿತಿ ತಾಲ್ಲೂಕು ಅಧ್ಯಕ್ಷ ಅರಸೀಕೆರೆ ವೈ.ಡಿ. ಅಣ್ಣಪ್ಪ ಮಾತನಾಡಿ, ಪರಿಶಿಷ್ಟ ಪಂಗಡದ ಪ್ರಭಾವಿ ನಾಯಕರಾದ ಸತೀಶ್ ಜಾರಕಿಹೊಳಿ ಅವರ ಸೇವೆಯನ್ನು ವಿವರಿಸಿದರು.

ತಾಲ್ಲೂಕು ವಾಲ್ಮೀಕಿ ನಾಯಕ ಮಹಿಳಾ ಘಟಕದ ಅಧ್ಯಕ್ಷರಾದ ಕಂಚಿಕೇರಿ ಜಯಲಕ್ಷ್ಮಿ ಹಾಗೂ ಏಕಲವ್ಯ ಸಂಘರ್ಷ ಸಮಿತಿ ಅಧ್ಯಕ್ಷ ರಾಯದುರ್ಗದ ಪ್ರಕಾಶ್ ಮಾತನಾಡಿ, ವಾಲ್ಮೀಕಿ ನಾಯಕ ಜನಾಂಗದ 4 ಜನರಿಗೆ ಸಚಿವ ಸ್ಥಾನ ನೀಡಬೇಕು. ಸತೀಶ್ ಜಾರಕಿಹೊಳಿಯವರಿಗೆ ಉಪಮುಖ್ಯಮಂತ್ರಿ ಸ್ಥಾನ ನೀಡಬೇಕು ಎಂದು ಆಗ್ರಹಿಸಿದರು.

ಉಪಾಧ್ಯಕ್ಷ ಶಿವಾನಂದ, ಪ್ರಧಾನ ಕಾರ್ಯದರ್ಶಿ ಗಿರಜ್ಜಿ ನಾಗರಾಜ, ಸಂಘಟನಾ ಕಾರ್ಯದರ್ಶಿಗಳಾದ ಫಣಿಯಾಪುರ ಲಿಂಗರಾಜ್, ಹಲವಾಗಲು ಎಂ. ನಂದಿಕೇಶವ, ನೀಲಗುಂದ ತಿಮ್ಮೇಶ, ತಾ. ಪಂ. ಮಾಜಿ ಅಧ್ಯಕ್ಷ ಹಳ್ಳಿಕೇರಿ ಎಚ್.ರಾಜಪ್ಪ, ಕಿತ್ತೂರು ಓಬಪ್ಪ, ಉಪನ್ಯಾಸಕ ಎಂ. ಸುರೇಶ್, ಕೆ.ಇ.ಬಿ. ನಿವೃತ್ತ ಇಂಜಿನಿಯರ್ ಭೀಮಪ್ಪ, ನಿವೃತ್ತ ಮುಖ್ಯ ಶಿಕ್ಷಕ ಆನಂದಪ್ಪ, ಮುಖಂಡರಾದ ಬಿ. ಅಂಜಿನಪ್ಪ, ತೆಲಗಿ ಉಮಾಕಾಂತ, ಟಿ. ಮಂಜುನಾಥ ತೆಲಗಿ ಕೆ. ಯೋಗೇಶ್, ನೀಲಗುಂದ ಬಿ. ವಾಗೀಶ್, ದುಗ್ಗಾವತಿ ಮಂಜುನಾಥ, ನೀಲಗುಂದ ತಿಮ್ಮೇಶ್, ಮಾರುತಿ ಮೈದೂರು, ಬಾಲೇನಹಳ್ಳಿ ಕೆಂಚನಗೌಡ, ದ್ಯಾಪನಾಯಕನಹಳ್ಳಿ ಜಿ.ಕೆ.ಬಸವರಾಜ, ಮಂಡಕ್ಕಿ ಸುರೇಶ್, ಬಿ. ಚಂದ್ರಕಾಂತ, ಮಹಿಳಾ ಘಟಕದ ನೇತ್ರಾವತಿ, ಮಂಜುಳಾ, ದಾಕ್ಷಾಯಣಿ ಮಂಜುಳಾ, ಪವಿತ್ರ ಇದ್ದರು.

# ನೂತನ ತಂತ್ರಾಂಶದಿಂದ ದಿನದಲ್ಲಿ ಆಸ್ತಿ ನೋಂದಣಿ



ಹರಪನಹಳ್ಳಿ, ಮೇ 16- ಸಾರ್ವಜನಿಕರ ಸಮಯ ವ್ಯರ್ಥ ಮಾಡದೇ ಒಂದೇ ದಿನದಲ್ಲಿ ತಮ್ಮ ಆಸ್ತಿ ನೋಂದಣಿಯನ್ನು ಆನ್‌ಲೈನ್‌ನಲ್ಲಿ ಕಾವೇರಿ 2.0 ತಂತ್ರಾಂಶದ ಮೂಲಕ ನೋಂದಾಯಿಸಿಕೊಳ್ಳಬಹುದು ಎಂದು ಜಿಲ್ಲಾ ನೋಂದಣಾಧಿಕಾರಿ ಕರಿಯಮ್ಮ ಕೆ.ಟಿ.ಓ. ಹೇಳಿದರು.

ಪಟ್ಟಣದ ಉಪ ನೋಂದಣಾಧಿಕಾರಿಗಳ ಕಛೇರಿಯಲ್ಲಿ ನೋಂದಣಿ ಮತ್ತು ಮುದ್ರಾಂಕ ಇಲಾಖೆ ವತಿಯಿಂದ ಹಮ್ಮಿಕೊಂಡಿದ್ದ ಕಾವೇರಿ 2.0 ತಂತ್ರಾಂಶಕ್ಕೆ ಚಾಲನೆ ನೀಡಿ ಮಾತನಾಡಿದರು.

ಈ ಹಿಂದೆ ಆಸ್ತಿಗಳನ್ನು ಕೈ ಬರಹದಿಂದ ನೋಂದಣಿ ಮಾಡಲಾಗುತ್ತಿತ್ತು. ನಂತರ ಕಾವೇರಿ 2.0 ತಂತ್ರಾಂಶ ಅಭಿವೃದ್ಧಿಗೊಂಡಿದ್ದರಿಂದ ಕಛೇರಿಯಲ್ಲಿ ಕಂಪ್ಯೂಟರ್ ಮೂಲಕ ನೋಂದಣಿ ಮಾಡಲಾಗುತ್ತಿದೆ. ಈ ತಂತ್ರಜ್ಞಾನವು ಇನ್ನು ಮುಂದುವರೆದು, ಕಾವೇರಿ 2.0 ಆನ್‌ಲೈನ್ ಮೂಲಕ ನೋಂದಣಿ ಮಾಡಲು ನೆರವಾಗುತ್ತದೆ ಎಂದರು.

ಉಪ ನೋಂದಣಾಧಿಕಾರಿ ದೀಪ ಮ್ಯಾಳಿ ಮಾತನಾಡಿ, ಕಾವೇರಿ 2.0 ತಂತ್ರಾಂಶದ ಅಂತರ್ಜಾಲದಲ್ಲಿ ಖರೀದಿದಾರರು, ಮಾರಾಟಗಾರರು ಹಾಗೂ ನೋಂದಾಯಿಸಿದ ಆಸ್ತಿಯ ದಾಖಲೆಗಳನ್ನು ನೋಂದಣಿ ಮಾಡಿದಾಗ ನೋಂದಣಾಧಿಕಾರಿಗಳು ದಾಖಲೆಗಳನ್ನು ಪರಿಶೀಲಿಸಿದ ಬಳಿಕ ನಿಗದಿಪಡಿಸಿದ ಶುಲ್ಕ ಪಾವತಿಸಿದ ನಂತರ ನೋಂದಣಿ ಮಾಡಲಾಗುವುದು.

ಈ ನೂತನ ತಂತ್ರಜ್ಞಾನದ ಉಪಯೋಗವನ್ನು ಸಾರ್ವಜನಿಕರು ಸದುಪಯೋಗ ಮಾಡಿಕೊಳ್ಳಬೇಕು ಎಂದರು. ಈ ವೇಳೆ ತಹಶೀಲ್ದಾರ್ ಶಿವಕುಮಾರ್ ಬಿರಾದಾರ್ ಸೇರಿದಂತೆ ಇತರರು ಉಪಸ್ಥಿತರಿದ್ದರು.


**KVR CONSTRUCTION HEIGHTS PRIVATE LTD.,**

**REQUIRMENT**

Civil Engeneers-15 No.'s, 2-3 years experience above.
Send Resume to the mail Id and whatsapp to the below details.

**M/s KVR Construction Heights Private Limited**

E-mail : kvrcheightspvtltd@gmail.com

Interested candidates can walk in for

**Interview on Date :18.5.2023 at 10.30 AM**

#1848/44-45, 3rd Cross, Vinayaka Badavane, Vidyanagar, Davanagere. Karnataka 577005

**M : 8861000859, 7353827999**



**WANTED SALES EXECUTIVES**

Location : Davanagere

*A reputed firm wants Sales Executive (Men) Salary Negotiable.*

**Contact Immediate**

**G.R ENTERPRISES**

Site No-E-96, E Block, APMC Yard Davanagere 577003

**M : 91088 25454**



**ಶ್ರೀ ಹುಲ್ಲು ಮನೆ ಸೌಹಾರ್ದ ಸಹಕಾರಿ ನಿ., ದಾವಣಗೆರೆ**

ಇದರ 2023-24 ರಿಂದ 2027-28ರ ಐದು ವರ್ಷಗಳ ಅವಧಿಯ ಆಡಳಿತ ಮಂಡಳಿ ನಿರ್ದೇಶಕರ 13 ಸ್ಥಾನಗಳಿಗೆ ಸಾಮಾನ್ಯ ಚುನಾವಣೆಯ ವೇಳಾಪಟ್ಟಿಯನ್ನು ಪ್ರಕಟಿಸಲಾಗಿದ್ದು, ಎಲ್ಲಾ ಅರ್ಹ ಸದಸ್ಯ ಮತದಾರರಿಗೆ ಚುನಾವಣಾ ವೇಳಾಪಟ್ಟಿಯನ್ನು ರವಾನಿಸಲಾಗಿದೆ. ನಾಮಪತ್ರ ಸಲ್ಲಿಸಲು ದಿನಾಂಕ 23.5.2023 ಕೊನೆಯ ದಿನವಾಗಿರುತ್ತದೆ.

ಹೆಚ್ಚಿನ ವಿವರಕ್ಕೆ ಸಹಕಾರಿಯ ಕಚೇರಿಯನ್ನು ಸಂಪರ್ಕಿಸಲು ಸೂಚಿಸಲಾಗಿದೆ.

(ನಾರಾಯಣ ಟಿ.ಹೆಚ್.)

ರಿಟರ್ನಿಂಗ್ ಅಧಿಕಾರಿ

ಶ್ರೀ ಹುಲ್ಲುಮನೆ ಸೌಹಾರ್ದ ಸಹಕಾರಿ ನಿ., ದಾವಣಗೆರೆ.

ಮೊ : 89703 22193



**WANTED**

1. Require **Sales Men & Sales Girls** to work in cloth Store.
2. Require **Computer Operators for DATA ENTRY** Work with Basic Knowledge fo Tally.

Interested can Apply with proper Resume along with Passport Size Photo Attested.

**ASHUJI DISTRIBUTORS**

#323, Binny Company Road, Davanagere.


# ಮಾದಿಗ ಸಮಾಜಕ್ಕೆ ಅವಹೇಳನ



**(1ನೇ ಪುಟದಿಂದ)** ಅವರಿಗೆ, ಶಾಲು ಹಾರವನ್ನು ಹಾಕಿ ಸನ್ಮಾನ ಮಾಡುವುದಕ್ಕೆ ಹೋಗಿದ್ದಾರೆ. ಆಗ ಹರೀಶ್ ಅವಹೇಳನ ಮಾಡಿದ್ದಾರೆ ಎಂದು ದೂರಲಾಗಿದೆ. ಬಿಜೆಪಿ ಸರ್ಕಾರದ ಅವಧಿಯಲ್ಲಿ ಸದಾಶಿವ ಆಯೋಗದ ವರದಿಯಂತೆ ಮೀಸಲಾತಿ ಹೆಚ್ಚಿಸಲಾಗಿದೆ. ಆದರೂ ನೀವು ನನಗೆ ಮತ ಹಾಕಿಲ್ಲ ಎಂದಿದ್ದಾರೆ. ಮುಂದುವರೆದು ಅವರು ಅವಹೇಳನಕಾರಿ ಮಾತನಾಡಿದ್ದಾರೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

ಪ್ರತಿಭಟನಾ ಸ್ಥಳಕ್ಕೆ ಮಾಯಕೊಂಡ ಮಾಜಿ ಶಾಸಕ ಪ್ರೊ. ಲಿಂಗಣ್ಣ ಮತ್ತು ಹರಿಹರ ತಾಲ್ಲೂಕು ಬಿಜೆಪಿ ಉಸ್ತುವಾರಿ ಜೀವನಮೂರ್ತಿ ಆಗಮಿಸಿ ನಗರಸಭೆ ಸದಸ್ಯರಾದ ಪಿ.ಎನ್. ವಿರುಪಾಕ್ಷಪ್ಪ, ರಜನಿಕಾಂತ್, ಹನುಮಂತಪ್ಪ, ಸಮುದಾಯದ ಮುಖಂಡರಾದ ಹೆಚ್. ನಿಜಗುಣ, ಎಂ.ಬಿ. ಅಣ್ಣಪ್ಪ, ಜಿ.ವಿ. ವೀರೇಶ್, ಕೊಟ್ರೇಶ್, ಬಿ.ಎನ್. ರಮೇಶ್, ಎಂ.ಎಸ್. ಆನಂದ್, ನಾಗಭೂಷಣ, ಪೌರ ಕಾರ್ಮಿಕರ ಸಂಘದ ಮುಖಂಡರಾದ ಗುರು, ಸದಾಶಿವ, ಹುಲುಗಪ್ಪ, ಪ್ರಭಾಕರ್ ಸೇರಿದಂತೆ ಹಲವು ಪ್ರಮುಖರ ಜೊತೆಗೆ ಮಾತುಕತೆ ನಡೆಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಪ್ರೊ. ಲಿಂಗಣ್ಣ ನನಗೆ ಶಾಸಕ ಹರೀಶ್ ಅವರು ದೂರವಾಣಿ ಕರೆ ಮಾಡಿ ಮಾತನಾಡಿದ್ದಾರೆ. ಬೆಳಿಗ್ಗೆ ನನಗೆ ಬಿ.ಪಿ. ಹೆಚ್ಚಾಗಿ ಸ್ವಲ್ಪ ಸಮಯ ಆರೋಗ್ಯದಲ್ಲಿ ಏರುಪೇರಾಗಿತ್ತು. ಪೌರಕಾರ್ಮಿಕರ ಸನ್ಮಾನದ ವೇಳೆ ಅರಿಯದೇ ಕೆಲವು ಮಾತನಾಡಿರಬಹುದು. ತಪ್ಪಾಗಿದ್ದರ ಬಗ್ಗೆ ಕ್ಷಮೆ ಕೋರುವೆ ಎಂದಿದ್ದಾರೆ ಎಂದರು.

ಈ ವೇಳೆ ಹುಲುಗಪ್ಪ, ಸದಾಶಿವ, ಪ್ರಭಾಕರ್, ಗುರು, ಹೆಚ್. ನಿಜಗುಣ, ಎಂ.ಬಿ. ಅಣ್ಣಪ್ಪ, ನಾಗಭೂಷಣ ಮಾತನಾಡಿ, ನಮ್ಮ ಸಮಾಜದ ಬಗ್ಗೆ ಹಗುರವಾಗಿ ಮಾತನಾಡಬಾರದು. ಮೀಸಲಾತಿ ಹೆಚ್ಚಳಕ್ಕೆ ಸಂಬಂಧಿಸಿದಂತೆ ಬಿಜೆಪಿ ಸರ್ಕಾರ ಮೂಗಿಗೆ ತುಪ್ಪ ಸವರುವ ಕೆಲಸ ಮಾಡಿದೆ ಎಂದರು.

ಅವರು ಎಲ್ಲೋ ಇದ್ದು ಕ್ಷಮೆ ಯಾಚಿಸುವುದಾಗಿ ಹೇಳಿದಾಗ ನಾವು ಅದನ್ನು ಕೇಳಿಕೊಂಡು ಸುಮ್ಮನೆ ಇರುವುದಕ್ಕೆ ಸಾಧ್ಯವಿಲ್ಲ. ಸಮುದಾಯದ ಮುಂದೆ ಬಂದು ಅವರು ಕ್ಷಮೆ ಯಾಚಿಸಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ದಲಿತ ಸಮುದಾಯದ ಮುಖಂಡರಾದ ನಗರಸಭೆಯ ಸದಸ್ಯರಾದ ಪಿ.ಎನ್. ವಿರುಪಾಕ್ಷಪ್ಪ, ರಜನಿಕಾಂತ್ ಹನುಮಂತಪ್ಪ ಮುಖಂಡರಾದ ಹೆಚ್. ನಿಜಗುಣ, ಎಂ.ಬಿ. ಅಣ್ಣಪ್ಪ, ಜಿ.ವಿ. ವೀರೇಶ್, ನಾಗಭೂಷಣ, ಎಂ.ಎಸ್.ಆನಂದ್, ಮೈಲಾರಪ್ಪ, ಬಿ.ಎನ್. ರಮೇಶ್, ಪಿ.ಜೆ. ಮಹಾಂತೇಶ್, ಹೆಚ್. ಶಿವಪ್ಪ, ಭಾನುವಳ್ಳಿ ಮಂಜುನಾಥ್, ಎ.ಕೆ. ಶಿವರಾಮ್, ಕೊಟ್ರೇಶ್, ಕೊತ್ವಾಲ ಹನುಮಂತಪ್ಪ, ಡಿ. ಹನುಮಂತಪ್ಪ, ಸಂತೋಷ ನೋಟದರ್, ರಘುಪತಿ, ಸುಧಾಕರ್, ದೇವೇಂದ್ರಪ್ಪ, ಹುಲುಗಪ್ಪ, ಗುರು, ಚೆನ್ನಕೇಶವ, ಕೇಶವ ಮತ್ತಿತರರು ಹಾಜರಿದ್ದರು.

# ಹಡಗಲಿ: ಜೆ.ಎಸ್.ಎಸ್ ಪಬ್ಲಿಕ್ ಶಾಲೆಗೆ ಶೇ 100ರ ಫಲಿತಾಂಶ



ಹೂವಿನಹಡಗಲಿ, ಮೇ 16- ಜೆಎಸ್ಎಸ್ ಮಹಾವಿದ್ಯಾಪೀಠ ಮೈಸೂರು ಇವರ ಆಶ್ರಯದಲ್ಲಿ ನಡೆಯುತ್ತಿರುವ ಜೆ.ಎಸ್.ಎಸ್. ಪಬ್ಲಿಕ್ ಶಾಲೆಯ ಸಿ.ಬಿ.ಎಸ್.ಇ. 10ನೇ ತರಗತಿಯ 2023ನೇ ಸಾಲಿನ ಫಲಿತಾಂಶವು ಶೇ. 100 ರಷ್ಟು ಫಲಿತಾಂಶ ಲಭಿಸಿದ್ದು, ನಿರಂತರ 9ನೇ ವರ್ಷವೂ ಶೇಕಡ 100 ಫಲಿತಾಂಶ ಲಭಿಸಿದೆ. 20 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್‌ನಲ್ಲಿ, 12 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ.

ಕು.ಸಹನಾ. ಎನ್.ಎಚ್ (ಶೇ.93) ಶಾಲೆಗೆ ಪ್ರಥಮ ಸ್ಥಾನ, ಹೇಮಂತ್.ಸಿ (ಶೇ.90) ಅಂಕ ಗಳಿಸಿ ದ್ವಿತೀಯ ಸ್ಥಾನ ಹಾಗೂ ಮೊಹಮ್ಮದ್ ಊರ್ವ ಎಫ್.ಜಿ ಹಾಗೂ ಅಭಿಷೇಕ್.ಹೆಚ್ (ಶೇ.89) ಅಂಕಗಳನ್ನು ಗಳಿಸಿ ತೃತೀಯ ಸ್ಥಾನ ಪಡೆದಿದ್ದಾರೆ. ವಿದ್ಯಾರ್ಥಿಗಳನ್ನು ಪ್ರಾಚಾರ್ಯ ಎನ್. ಗುರುಸ್ವಾಮಿ ಅಭಿನಂದಿಸಿದ್ದಾರೆ.

# ಸ್ಥಾನದ ಬಗ್ಗೆ ರಾಹುಲ್ ಚರ್ಚೆ

**(1ನೇ ಪುಟದಿಂದ)** ಅವರು ವೇಣುಗೋಪಾಲ್ ನಿವಾಸಕ್ಕೆ ತೆರಳಿದರು. ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶಿವಕು ಮಾರ್ ಅವರು ಬೆಂಗಳೂರಿನಿಂದ ರಾಜಧಾನಿಗೆ ಬಂದವರೇ ತಮ್ಮ ಸಹೋದರನ ನಿವಾಸಕ್ಕೆ ತೆರಳಿದರು. ನಂತರ ಸಂಜೆ 5ಕ್ಕೆ ಖರ್ಗೆ ನಿವಾಸಕ್ಕೆ ತೆರಳಿ ಚರ್ಚಿಸಿದರು.ನಂತರ ಪತ್ರಕರ್ತರೊಂದಿಗೆ ಮಾತನಾಡಿದ ಶಿವಕುಮಾರ್, ಸಿಎಂ ಸ್ಥಾನ ಸಿಗದಿದ್ದರೆ ಪಕ್ಷಕ್ಕೆ ರಾಜೀ ನಾಮೆ ನೀಡುವ ಪ್ರಶ್ನೆಯೇ ಇಲ್ಲ. ನಾವು ಪಕ್ಷವನ್ನು ಕಟ್ಟಿದ್ದೇವೆ ಎಂದರು.

# ಕೆಟಿಜೆ ನಗರ 2ನೇ ಕ್ರಾಸ್‌ನಲ್ಲಿ ನಾಡಿದ್ದು ಶ್ರೀ ಶನೇಶ್ವರ ಸ್ವಾಮಿ ಜಯಂತಿ



ದಾವಣಗೆರೆ, ಮೇ 16- ಕೆ.ಟಿ.ಜೆ. ನಗರದ 2ನೇ ಕ್ರಾಸ್ ಶಿವಪ್ಪಯ್ಯ ವೃತ್ತದ ಬಳಿ ಇರುವ ಮಹಾ ಗಣಪತಿ, ಶನೇಶ್ವರ ಸ್ವಾಮಿ ಹಾಗೂ ದುರ್ಗಾದೇವಿ ದೇವಸ್ಥಾನದಲ್ಲಿ ಶನೇಶ್ಚರ ಸ್ವಾಮಿ ಜಯಂತಿಯನ್ನು ಇದೇ ದಿನಾಂಕ 19 ರಂದು ಶುಕ್ರವಾರ ಸ್ವಾಮಿಗೆ ಬೆಳಿಗ್ಗೆ 6 ಗಂಟೆಗೆ ತೈಲ ಅಭಿಷೇಕ ಹಾಗೂ 7 ಕ್ಕೆ ಪಂಚಾಮೃತ ಅಭಿಷೇಕ, 8ಕ್ಕೆ ರುದ್ರಾಭಿಷೇಕ 8:30 ಕ್ಕೆ ತೊಟ್ಟಿಲೋತ್ಸವ ಈ ಎಲ್ಲಾ ಕಾರ್ಯಕ್ರಮಗಳನ್ನು ಪುರೋಹಿತರಾದ ವಿಲಾಸ್ ಭಟ್ರು ಹಾಗೂ ವೃಂದದವರಿಂದ ನಡೆಯಲಿದೆ.

9ಕ್ಕೆ ಶನಿ ಹೋಮ, ಅಂದು ಸಂಜೆ 6 ಕ್ಕೆ ಶ್ರೀ ಶನೇಶ್ಚರ ಸ್ವಾಮಿಗೆ ಸುಮಂಗಲಿಯರಿಂದ ಪೂರ್ಣ ಕುಂಭದೊಂದಿಗೆ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮೂಲಕ ರಥೋತ್ಸವ ನೆರವೇರಲಿದೆ. ನಂತರ ರಾತ್ರಿ 8 ಗಂಟೆಗೆ ಅನ್ನ ಸಂತರ್ಪಣೆ ನಡೆಯಲಿದೆ. ವಿವರಕ್ಕೆ ಸಂಪರ್ಕಿಸುವ ಮೊಬೈಲ್ ಸಂ. 8550039411 ಕ್ಕೆ ಸಂಪರ್ಕಿಸಿ.

# ಕರ್ನಲ್ ರವೀಂದ್ರನಾಥ್ ಜನ್ಮ ದಿನಾಚರಣೆ




ದಾವಣಗೆರೆ, ಮೇ 16- ದಾವಣಗೆರೆಯ ಹೆಮ್ಮೆಯ ಪುತ್ರ, ಕಾರ್ಗಿಲ್ ಯುದ್ಧದ ವಿಜಯದ ರೂವಾರಿಯಾಗಿದ್ದ ಕರ್ನಲ್ ಎಂ.ಬಿ. ರವೀಂದ್ರನಾಥ್ ಅವರ ಹುಟ್ಟು ಹಬ್ಬವನ್ನು ಅವರ ಸ್ಮರಣಾರ್ಥ ನಗರದ 'ವೀರಚಕ್ರ ಕರ್ನಲ್ ರವೀಂದ್ರನಾಥ್' ವೃತ್ತದಲ್ಲಿ ಬಿಜಾಪುರ ಸೈನಿಕ ಶಾಲೆಯ ಹಳೆಯ ವಿದ್ಯಾರ್ಥಿಗಳ ಸಂಘ ಹಾಗೂ ದಾವಣಗೆರೆ ಎನ್‌ಸಿಸಿ ಬೆಟಾಲಿಯನ್ ವತಿಯಿಂದ ಇಂದು ಆಚರಿಸಲಾಯಿತು.

ದಂತವೈದ್ಯ ಡಾ. ಶಿವಮೂರ್ತಿ ದಾಗಿನಕಟ್ಟೆ ಹಾಗೂ ಎನ್‌ಸಿಸಿ ಕಮಾಂಡೆಂಟ್ ಸುತ್ತಗಟ್ಟಿ ಇವರು ಕಾರ್ಯಕ್ರಮ ಆಯೋಜಿಸಿದ್ದರು. ಬಿಜಾಪುರ ಸೈನಿಕ ಶಾಲೆಯ ಹಳೆಯ ವಿದ್ಯಾರ್ಥಿಗಳು, ಎನ್‌ಸಿಸಿ ವಿದ್ಯಾರ್ಥಿಗಳು ಸೇರಿದಂತೆ ಅನೇಕರು ಭಾಗವಹಿಸಿದ್ದರು.

KA/SK/CTA-275/2021-2023. O/P @ B.V. Nagar P.O. **JANATHAVANI -** Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

# ಮತದಾರರ ತೀರ್ಪು ಸ್ವಾಗತಿಸುತ್ತೇವೆ



**ಜಗಳೂರು: ಬಿಜೆಪಿ ಮಂಡಲ ಅಧ್ಯಕ್ಷ ಹೆಚ್.ಸಿ. ಮಹೇಶ್**

ಜಗಳೂರು, ಮೇ 16- ವಿಧಾನಸಭಾ ಚುನಾವಣೆಯಲ್ಲಿ ಕೇವಲ 874 ಅಲ್ಪ ಮತಗಳ ಅಂತರದಲ್ಲಿ ಬಿಜೆಪಿ ಸೋಲು ಅನುಭವಿಸಿದ್ದು, ಮತದಾರರ ತೀರ್ಪನ್ನು ಸ್ವಾಗತಿಸುತ್ತೇವೆ ಎಂದು ಬಿಜೆಪಿ ಮಂಡಲ ಅಧ್ಯಕ್ಷ ಎಚ್.ಸಿ.ಮಹೇಶ್ ತಿಳಿಸಿದರು.

ಇಂದಿಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕೇಂದ್ರ ಮತ್ತು ರಾಜ್ಯದಲ್ಲಿ ಬಿಜೆಪಿ ಆಡಳಿತಾರೂಢ ಸರ್ಕಾರದ ಫಲವಾಗಿ ತಾಲ್ಲೂಕಿಗೆ ಮೂರು ಶಾಶ್ವತ ನೀರಾವರಿ ಯೋಜನೆಗಳು ಸಾಕಾರ ಗೊಂಡು ಕಾಮಗಾರಿಗಳು ಪ್ರಗತಿಯಲ್ಲಿವೆ. ಮತ್ತೊಮ್ಮೆ ಆಡಳಿತಕ್ಕೆ ಬಂದು ಕಾಮಗಾರಿ ಮುಂದುವರೆಸಲು ನಿರೀಕ್ಷೆಯಿಟ್ಟಿದ್ದೆವು ಎಂದರು.

ಬಿಜೆಪಿ ಅಭ್ಯರ್ಥಿ ಮಾಜಿ ಶಾಸಕ ರಾಮಚಂದ್ರ ಅವರಿಗೆ 49,891 ಮತಗಳನ್ನು ನೀಡಿದ ಮತದಾರರಿಗೆ ಹಾಗೂ ಚುನಾವಣೆಯಲ್ಲಿ ಶ್ರಮಿಸಿದ ಪಕ್ಷದ ಎಲ್ಲಾ ಕಾರ್ಯಕರ್ತರಿಗೆ, ಅಭಿಮಾನಿಗಳಿಗೆ ಕೃತಜ್ಞತೆ ಸಲ್ಲಿಸುವುದಾಗಿ ಹೇಳಿದರು.

ಕ್ಷೇತ್ರದಲ್ಲಿ ಬಿಜೆಪಿ, ಕಾಂಗ್ರೆಸ್, ಪಕ್ಷೇತರ ಅಭ್ಯರ್ಥಿಗಳ ತ್ರಿಕೋನ ಸ್ಪರ್ಧೆಯಲ್ಲಿ ಕಾಂಗ್ರೆಸ್ ಪಕ್ಷ ಅಲ್ಪಮತಗಳಲ್ಲಿ ಗೆಲುವು ಸಾಧಿಸಿದೆ. ರಾಜ್ಯದಲ್ಲಿಯೂ ಕಾಂಗ್ರೆಸ್ ಬಹುಮತ ಪಡೆದಿದ್ದು, ಅಭಿವೃದ್ದಿ ಕಾಮಗಾರಿ ಕೈಗೊಳ್ಳಬೇಕು. ನೀರಾವರಿ ಯೋಜನೆಗಳ ಕಾಮಗಾರಿಗಳನ್ನು ಪೂರ್ಣಗೊಳಿಸಲು ನಮ್ಮ ಸಹಕಾರ ವಿದೆ. ಆದರೆ ಭ್ರಷ್ಟಾಚಾರದ ಆಡಳಿತ, ಅಭಿವೃದ್ದಿ ಕುಂಠಿತವಾದಲ್ಲಿ ವಿರೋಧ ಪಕ್ಷದವರಾದ ನಾವು ಜನಪರವಾದ ಹೋರಾಟ ನಡೆಸುತ್ತೇವೆ ಎಂದು ಮಹೇಶ್ ಎಚ್ಚರಿಸಿದರು.

ಮುಖಂಡ ರಾದ ಬಿದರಕೆರೆ ರವಿಕುಮಾರ್, ವಕೀಲ ಹನುಮಂತಪ್ಪ, ಹೊನ್ನಮರಡಿ ಬಾಲರಾಜ್, ಬಸವರಾಜ್, ಯೋಗಾ ನಂದ, ರವಿಕುಮಾರ್ ಗೋಷ್ಠಿಯಲ್ಲಿದ್ದರು.

# ಸೈನಿಕರೊಂದಿಗೆ ಸಾಣೇಹಳ್ಳಿಯ ಸ್ವಾಮೀಜಿ ಸಂವಾದ



ಸಾಣೇಹಳ್ಳಿ, ಮೇ 16- ಭಾರತೀಯ ಸೇನೆಯ ಯೋಧರ ಜೊತೆ ಇಲ್ಲಿನ ಶ್ರೀಮಠದ ಶ್ರೀ ಶಿವಕುಮಾರ ಬಯಲು ರಂಗಮಂದಿರದಲ್ಲಿ ಸಾಣೇ ಹಳ್ಳಿಯ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಸಂವಾದ ನಡೆಸಿದರು. ಶ್ರೀಮಠದಿಂದ ಔತಣ ನೀಡುವ ಮೂಲಕ, ದೇಶ ಕಾಯುವ ಸೈನಿಕರನ್ನು ಗೌರವಿಸಿ, ಆಶೀರ್ವದಿಸಿದರು.

ಚುನಾವಣಾ ಕಾರ್ಯಕ್ಕೆ ಕರ್ತವ್ಯದ ಮೇಲೆ ಬಂದಿದ್ದ ಭಾರತೀಯ ಸೇನೆಯ (ಸಿಆರ್‌ಪಿಎಫ್‌ನ ಡಿ/134 ತುಕಡಿಯ 60 ಜನರ ತಂಡ) ತಂಡ ಕಳೆದ ಒಂದು ತಿಂಗಳಿಂದ ಶ್ರೀಮಠದ ಪಕ್ಕದಲ್ಲೇ ಇರುವ ವಸತಿ ನಿಲಯದಲ್ಲಿ ಬೀಡು ಬಿಟ್ಟಿತ್ತು. ದಿನವೂ ಬೆಳಗ್ಗೆ ತೋಟಕ್ಕೆ ಹೋಗುವಾಗ ಅಲ್ಲಿಂದಲೇ ಪೂಜ್ಯರು ಹಾದು ಹೋಗುತ್ತಿದ್ದರು. ಆಗೆಲ್ಲ ವ್ಯಾಯಾಮ ನಿರತರಾಗಿದ್ದ ಸೈನಿಕರು ಪೂಜ್ಯರಿಗೆ ಅಲ್ಲಿಂದಲೇ ಕೈಮುಗಿದು ನಮಸ್ಕರಿಸುತ್ತಿದ್ದರು.

ಪೂಜ್ಯರೂ ದೂರದಿಂದಲೇ ಆಶೀರ್ವದಿಸುತ್ತಿದ್ದರು. ಆದರೆ, ಅವರಿಗೆ ಪೂಜ್ಯರ ಬಗ್ಗೆ, ಮಠದ ಬಗ್ಗೆ, ಮಠದ ಚಟುವಟಿಕೆಗಳ ಬಗ್ಗೆ ತಿಳಿದು ಕೊಳ್ಳುವ ಹಂಬಲವಿತ್ತು. ಆದರೆ ಅವರಲ್ಲಿನ ಕೆಲವರು ಕರ್ತವ್ಯದ ಮೇಲೆ ಬೇರೆ ಬೇರೆ ಕಡೆ ಹೋಗಿರುತ್ತಿದ್ದರಿಂದ ಎಲ್ಲರೂ ಒಟ್ಟಿಗೆ ಸೇರುವ ಸಮಯಾವಕಾಶವಾಗಿರಲಿಲ್ಲ.

ಚುನಾವಣೆ ಮುಗಿದಂತೆ ಅವರ ಕರ್ತವ್ಯಗಳೂ ಮುಗಿದು ಸೈನಿಕರು ತಮ್ಮ ತಮ್ಮ ಮೂಲ ಸ್ಥಾನಗಳಿಗೆ ಒಂದೆರಡು ದಿನಗಳಲ್ಲಿ ಹಿಂದಿರುಗಬೇಕಾದ ಅನಿವಾರ್ಯತೆ ಉಂಟಾಗಿತ್ತು. ಅವರ ಬಯಕೆಯನ್ನು ಈಡೇರಿಸುವ ಸಲುವಾಗಿ ಇಂದು ಸಂಜೆ ಅವರಿಗೆಲ್ಲ ಶ್ರೀಮಠದಲ್ಲಿ ಔತಣವನ್ನಿಟ್ಟು ಕೊಳ್ಳಲಾಗಿತ್ತು. ಔತಣಕ್ಕಿಂತ ಮುಂಚೆ ಬಯಲು ರಂಗಮಂದಿರದಲ್ಲಿ ಕುಳಿತು ಒಂದಿಷ್ಟು ಹೊತ್ತು ಸೈನ್ಯ, ಧರ್ಮ, ಬಸವಾದಿ ಶಿವಶರಣರು, ಅವರು ರಚಿಸಿದ ವಚನಗಳು, ರಾಜಕೀಯ, ಜನಜೀವನ, ಶಿಕ್ಷಣ, ಸಂಸ್ಕೃತಿ, ನಾಟಕ, ಸಾಹಿತ್ಯ, ಸಂಗೀತ, ಕರ್ನಾಟಕದ ವಾತಾವರಣ, ಜನರ ವರ್ತನೆ, ಆಲೋಚನೆ, ವಿಚಾರ-ನಿಲುವು ಮೊದಲಾದವುಗಳ ಕುರಿತು ಅನೌಪಚಾರಿಕವಾಗಿ ಪರಸ್ಪರ ಚರ್ಚಿಸಲಾಯಿತು.

ಈ ಸಂದರ್ಭದಲ್ಲಿ ಹೆಚ್. ಎಸ್. ದ್ಯಾಮೇಶ್ ಸ್ವಾಗತಿಸುವುದರ ಜೊತೆಗೆ ಅನುವಾದಕರಾಗಿ ಕೆಲಸ ಮಾಡಿದರು. ನಟರಾಜ್ ಹೊನ್ನವಳ್ಳಿ, ಬಿ.ಎಸ್. ಶಿವಕುಮಾರ್, ಟಿ.ಎಂ.ಮರುಳಸಿದ್ದಯ್ಯ, ರಾಜು, ಮಧು, ಜೀವನ್ ಮೊದಲಾದವರು ಉಪಸ್ಥಿತರಿದ್ದರು. ವೈ.ಡಿ.ಬದಾಮಿ ವಂದಿಸಿದರು. ಹೆಚ್.ಎಸ್.ನಾಗರಾಜ್ ವಚನ ಗೀತೆಗಳನ್ನು ಹಾಡಿದರು. ಸೈನಿಕರಲ್ಲೊಬ್ಬರು ದೇಶಭಕ್ತಿಗೀತೆ ಹಾಡಿದರು.

## ಹೈಕಮಾಂಡ್ ಕೇಳಿದರೆ ಸಿಎಂ ಹುದ್ದೆಗೆ ಸಿದ್ಧ

**-ಜಿ. ಪರಮೇಶ್ವರ್**


ಬೆಂಗಳೂರು, ಮೇ 16 – ಪಕ್ಷದ ಹೈಕಮಾಂಡ್ ಕೇಳಿದರೆ ನಾನೂ ಸಹ ಮುಖ್ಯಮಂತ್ರಿ ಹುದ್ದೆಯ ಜವಾಬ್ದಾರಿ ಹೊರಲು ಸಿದ್ಧವಿರುವುದಾಗಿ ಕಾಂಗ್ರೆಸ್ ಹಿರಿಯ ನಾಯಕ ಜಿ. ಪರಮೇಶ್ವರ್ ತಿಳಿಸಿದ್ದಾರೆ.

ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಹೈಕಮಾಂಡ್ ನನಗೆ ಸರ್ಕಾರ ನಡೆಸಲು ತಿಳಿಸಿದರೆ, ಆ ಜವಾಬ್ದಾರಿ ಹೊರಲು ಸಿದ್ಧನಿದ್ದೇನೆ ಎಂದರು.

ಚುನಾವಣೆಯನ್ನು ಪಕ್ಷ ಸಾಮೂಹಿಕ ನಾಯಕತ್ವದಲ್ಲಿ ಎದುರಿಸಿದೆ ಎಂದೂ ಪರಮೇಶ್ವರ್ ಹೇಳಿರುವದು ಆಸಕ್ತಿಕರವಾಗಿದೆ.

ಪಕ್ಷ ಚುನಾವಣೆಯನ್ನು ಸಾಮೂಹಿಕವಾಗಿ ಎದುರಿಸಿದೆ. ಯಾರಾದರೂ ಮುನ್ನಡೆಸಬೇಕು ಎಂದು ಕಾಂಗ್ರೆಸ್ ರಾಜ್ಯಾಧ್ಯಕ್ಷ ಡಿ.ಕೆ. ಶಿವಕುಮಾರ್ ಹಾಗೂ ಹಿರಿಯ ನಾಯಕ ಸಿದ್ದರಾಮಯ್ಯ ಅವರನ್ನು ನೇಮಿಸಲಾಗಿತ್ತು. ಹೈಕಮಾಂಡ್ ಮುಂದಿನ ಮುಖ್ಯಮಂತ್ರಿ ಬಗ್ಗೆ ನಿರ್ಧರಿಸಲಿದೆ. ಈ ಕೆಲಸವೇನೂ ಕಠಿಣವಲ್ಲ ಎಂದರು.

# ಅಧಿಕಾರಿಗಳಿಗೆ ಬೊಮ್ಮಾಯಿ ಧನ್ಯವಾದ



ಬೆಂಗಳೂರು, ಮೇ 16 - ಆಡಳಿತ ಅವಧಿಯಲ್ಲಿ ದಿಟ್ಟ ನಿರ್ಧಾರ ತೆಗೆದುಕೊಳ್ಳಲು ಸಹಕಾರ ನೀಡಿರುವುದಕ್ಕೆ ಹಂಗಾಮಿ ಮುಖ್ಯ ಮಂತ್ರಿ ಬಸವರಾಜ ಬೊಮ್ಮಾಯಿ ಅಧಿಕಾರಿಗಳಿಗೆ ಧನ್ಯವಾದ ಹೇಳಿದ್ದಾರೆ.

ಇಂದು ಗೃಹ ಕಚೇರಿ ಕೃಷ್ಣಾದಲ್ಲಿ ರಾಜ್ಯ ಸರ್ಕಾರದ ಅಧಿಕಾರಿಗಳಿಗೆ ಚಹಾ ಕೂಟ ಏರ್ಪಡಿಸಿ ಅನೌಪಚಾರಿಕವಾಗಿ ಮಾತನಾಡಿದರು.

ನಾವು ಸಂವಿಧಾನ ಒಪ್ಪಿಕೊಂಡಿದ್ದೇವೆ. ಆಡಳಿತದಲ್ಲಿ ಕಾರ್ಯಾಂಗ, ಶಾಸಕಾಂಗ ಎರಡೂ ಪ್ರಮುಖ ಪಾತ್ರ ವಹಿಸುತ್ತವೆ. ನಾವು ಅದರ ಅಡಿಯಲ್ಲಿ ಕೆಲಸ ಮಾಡುತ್ತಿದ್ದೇವೆ. ನಾನು ಅಧಿಕಾರಕ್ಕೆ ಬಂದಾಗ ಕೋವಿಡ್, ಪ್ರವಾಹ ಸಂದರ್ಭ ಎದುರಾಯಿ ತು. ಎಲ್ಲವನ್ನೂ ಯ ಶ ಸ್ವಿ ಯಾ ಗಿ ನಿಭಾಯಿಸಿದ್ದೇವೆ ಎಂದರು. ನಮ್ಮ ಆಡಳಿತದಲ್ಲಿ ಯಾವುದೇ ಹಿಂಸಾತ್ಮಕ ಚಟುವಟಿಕೆಗಳು ನಡೆಯಲಿಲ್ಲ. ಚುನಾವಣೆ ಸಂದರ್ಭದಲ್ಲಿಯೂ ಯಾವುದೇ ಅಹಿತಕರ ಘಟನೆ ನಡೆಯಲಿಲ್ಲ. ಗೃಹ ಇಲಾಖೆಗೆ ಅಭಿನಂದನೆ ಸಲ್ಲಿಸುತ್ತೇನೆ ಎಂದರು.

ನಾವು ಅನೇಕ ಮಹತ್ವದ ನಿರ್ಧಾರಗಳನ್ನು ತೆಗೆದುಕೊಂಡಿದ್ದೇವೆ. ಮೀಸಲಾತಿ ಹೆಚ್ಚಳ, ಹೊಸ ನೀತಿಗಳನ್ನು ಜಾರಿಗೆ ತಂದಿದ್ದೇವೆ. ಉದ್ಯೋಗ ನೀತಿ, ಕೈಗಾರಿಕಾ ನೀತಿ ಎಲ್ಲ ಹೊಸ ಯೋಜನೆಗಳನ್ನು ತರುವಲ್ಲಿ ಅಧಿಕಾರಿಗಳ ಪಾತ್ರ ಮಹತ್ವದ್ದು, ನಿಮ್ಮ ಸಹಕಾರ ಅತ್ಯಂತ ಮುಖ್ಯವಾಗಿತ್ತು ಎಂದರು.

ನಾವು ಐದು ವರ್ಷಕ್ಕೆ ಬರುವವರು, ನೀವು ಸುದೀರ್ಘ ಅಧಿಕಾರದಲ್ಲಿ ಇರುವವರು. ರಾಜ್ಯದ ಏಳಿಗೆಗೆ ಎಲ್ಲರೂ ಶ್ರಮಿಸೋಣ. ಕೆಲಸ ವೇಗವಾಗಿ ಆಗಲಿ ಅಂತ ನಾನು ಗಟ್ಟಿ ಧ್ವನಿಯಲ್ಲಿ ಹೇಳಿರಬಹುದು. ಆದರೆ ಯಾವುದೇ ವೈಯಕ್ತಿಕ ಅಭಿಪ್ರಾಯ ಇರಲಿಲ್ಲ ಎಂದರು.

ಕರ್ನಾಟಕ ಹಲವಾರು ವಿಚಾರಗಳಲ್ಲಿ ಮುಂಚೂಣಿಯಲ್ಲಿದೆ. ಜಿಎಸ್ಟಿಯಲ್ಲಿ ಮುಂಚೂಣಿಯಲ್ಲಿದ್ದೇವೆ. ಬಂಡವಾಳ ಸೆಳೆಯುವಲ್ಲಿ ನಂಬರ್ ಒನ್ ಸ್ಥಾನದಲ್ಲಿದ್ದೇವೆ. ಕರ್ನಾಟಕದ ಅಭಿವೃದ್ಧಿಗೆ ಅಧಿಕಾರಿಗಳ ಪಾತ್ರ ಮುಖ್ಯವಾಗಿದ್ದು, ರಾಜ್ಯದ ಅಭಿವೃದ್ಧಿಗೆ ಎಲ್ಲರೂ ಕೆಲಸ ಮಾಡೋಣ ಎಂದರು.

## ಸರ್ಕಾರ ರಚನೆಗೆ ಮುಹೂರ್ತ

(1ನೇ ಪುಟದಿಂದ) ಹೊಣೆ ಹೊತ್ತಿದ್ದ, ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರಿಗೆ ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ವಹಿಸಿಕೊಟ್ಟಿದ್ದಾರೆ.

ಮೇ 17ರ ಬುಧವಾರ ಸರ್ಕಾರ ರಚನೆ ಮಾಡುವ ಹಕ್ಕನ್ನು ರಾಜ್ಯಪಾಲ ಥ್ಯಾವರ್ ಚಂದ್ ಗೆಹ್ಲೋಟ್ ಅವರ ಸಮ್ಮುಖದಲ್ಲಿ ಮಂಡಿಸಲಿರುವ ಕಾಂಗ್ರೆಸ್ ನಿಯೋಗ ನೂತನ ಮುಖ್ಯಮಂತ್ರಿಗಳ ಪ್ರತಿ ಜ್ಞಾವಿಧಿ ಸಮಾರಂಭ ನಡೆಸಲು ಪತ್ರ ನೀಡಲಿದೆ.

# ಸೋಲಿಗೆ ಧೃತಿಗೆಡಲ್ಲ ; ಹೊಳಲ್ಕೆರೆ ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸುವೆ



ಹೊಳಲ್ಕೆರೆ, ಮೇ 16 - ಸಚಿವನಾಗಿ ರಾಜ್ಯ, ಜಿಲ್ಲೆ ಹಾಗೂ ಹೊಳಲ್ಕೆರೆ ಕ್ಷೇತ್ರದ ಅಭಿವೃದ್ದಿಗೆ ಶ್ರಮಿಸಿದ್ದರೂ ಕಳೆದ ಬಾರಿ ಸೋತಿದ್ದ ನನಗೆ ಈ ಬಾರಿ ಗೆಲುವು ನಿಶ್ಚಿತ ಎಂಬ ನನ್ನ ಭಾವನೆ ಹುಸಿಯಾಗಿದೆ. ಆದರೂ ಸೋಲಿಗೆ ಧೃತಿಗೆಡದೆ ಕ್ಷೇತ್ರದ ಅಭಿವೃದ್ಧಿಗೆ ಕೈಜೋಡಿಸುತ್ತೇನೆ ಎಂದು ಮಾಜಿ ಸಚಿವ ಎಚ್.ಆಂಜನೇಯ ತಿಳಿಸಿದ್ದಾರೆ.

ಕಳೆದ 1 ತಿಂಗಳಿನಿಂದ ಮುಖಂ ಡರು, ಕಾರ್ಯಕರ್ತರು, ಅಭಿಮಾನಿಗಳು ನನ್ನ ಪರ ಹಗಲು-ರಾತ್ರಿ ಪ್ರಚಾರ ಕಾರ್ಯ ನಡೆಸಿದ್ದರು. ಜೊತೆಗೆ ಕ್ಷೇತ್ರದ ಜನರು ಜಾತ್ಯತೀತವಾಗಿ ಪ್ರೀತಿ-ಅಭಿಮಾನ ತೋರಿದ್ದು ಸ್ಮರಣೀಯ. ಇದು ಸೋಲಿನ ಕಹಿ ಮರೆಸಲಿದೆ ಎಂದಿದ್ದಾರೆ. ಈ ವಿಷಯದಲ್ಲಿ ಹೊಳಲ್ಕೆರೆ ಕ್ಷೇತ್ರದ ಜನರ ಪ್ರೀತಿಗೆ ನಾನು ಸದಾ ಚಿರಋಣಿಯಾಗಿರುತ್ತೇನೆ ಎಂದು ಹೇಳಿದ್ದಾರೆ.

ಪ್ರತಿಸ್ಪರ್ಧಿ ಬಿಜೆಪಿ ಅಭ್ಯರ್ಥಿ ಹೇರಳವಾಗಿ ಹಣ-ಹೆಂಡ ಹಂಚಿದ್ದರೂ ಕ್ಷೇತ್ರದ ಜನ ನನಗೆ ಹೆಚ್ಚು ಮತಗಳನ್ನು ನೀಡಿದ್ದಾರೆ. ಕಡಿಮೆ ಮತಗಳ ಅಂತರ ಆಗಿದ್ದರೂ ಸೋಲು ಸೋಲೆ. ಈ ಸೋಲಿಗೆ ಕಾರಣ ಕಂಡುಕೊಳ್ಳುವ ಜೊತೆಗೆ ಕ್ಷೇತ್ರದ ಅಭಿವೃದ್ಧಿಗೆ ಸರ್ಕಾರದ ಮೇಲೆ ಒತ್ತಡ ಹಾಕಿ ಅನುದಾನ ತರಲು ಮುಂದಾಗುತ್ತೇನೆ ಎಂದಿದ್ದಾರೆ. ರಾಜ್ಯದಲ್ಲಿ ಪಕ್ಷ ಅಧಿಕಾರ ಹಿಡಿ ದು, ನಮ್ಮ ನಾಯಕರೇ ಮುಖ್ಯಮಂತ್ರಿ ಆಗು ತ್ತಿರುವುದ ರಿಂದ ಅವರ ಮೇಲೆ ಒತ್ತಡ ತಂದು ಕ್ಷೇತ್ರದಲ್ಲಿ ಆಗಬೇಕಿರುವ ಅಭಿವೃದ್ಧಿ ಕಾರ್ಯಕ್ಕೆ ಶ್ರಮಿಸುತ್ತೇನೆ ಎಂದು ಅವರು ತಿಳಿಸಿದರು.

## ಹಿಂದೂಗಳಲ್ಲ ಬಸವ ಅನುಯಾಯಿಗಳು

(1ನೇ ಪುಟದಿಂದ) ಜನತಾದಳ ಹಾಗೂ ಆನಂತರ ಬಿಜೆಪಿಗೆ ಬೆಂಬಲಿಸಿದರು. ಈ ಬಾರಿ ಜಗದೀಶ್ ಶೆಟ್ಟರ್ ಅವರನ್ನು ಸೋಲಿಸಲು ಬಿಜೆಪಿ ಅತಿ ಹೆಚ್ಚು ಗಮನ ಹರಿಸಿತ್ತು. ಶೆಟ್ಟರ್ ಸೋತರು, ಆದರೆ, ಉಳಿದ ಕ್ಷೇತ್ರಗಳಲ್ಲಿ ಅವರು ಕಾಂಗ್ರೆಸ್‌ಗೆ ಹೆಚ್ಚು ಮತ ತಂದಿದ್ದಾರೆ. ಉಳಿದೆಡೆ ಬಿಜೆಪಿ ಸೋಲುವಂತಾಗಿದೆ ಎಂದು ಶಿವಶಂಕರಪ್ಪ ವಿಶ್ಲೇಷಿಸಿದರು.

ಮುಂಬರುವ ಸಂಸತ್ ಚುನಾವಣೆ ಕುರಿತ ಪ್ರಶ್ನೆಗೆ ಉತ್ತರಿಸಿದ ಅವರು, ಚುನಾವಣಾ ಸಿದ್ಧತೆ ಬಗ್ಗೆ ನಾಯಕರು ನಿರ್ಧರಿಸಲಿದ್ದಾರೆ. ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್ ಹೆಚ್ಚು ಸ್ಥಾನಗಳನ್ನು ಗೆದ್ದರೆ 'ಮೋದಿ ಸಾಬ್' ಅಧಿಕಾರದಿಂದ ಹೋಗಲಿದ್ದಾರೆ ಎಂದರು.

## ಸಿಎಂ ಸ್ಥಾನಕ್ಕಾಗಿ ಸಭಾ ಒತ್ತಾಯ

(1ನೇ ಪುಟದಿಂದ) ಬಿಜೆಪಿಗೆ ಮತ ಚಲಾಯಿಸುತ್ತಿದ್ದ ವೀರಶೈವ ಲಿಂಗಾಯತರು ಈ ಬಾರಿ ಕಾಂಗ್ರೆಸ್‌ಗೆ ಬೆಂಬಲ ನೀಡಿದ್ದಾರೆ.

ಇದರಿಂದಾಗಿ ರಾಜ್ಯದಲ್ಲಿ ಕಾಂಗ್ರೆಸ್ 135 ಸ್ಥಾನ ಗೆಲ್ಲಲು ಸಾಧ್ಯವಾಗಿದೆ ಎಂದವರು ತಿಳಿಸಿದ್ದಾರೆ. ಮುಂಬ ರುವ ಲೋಕ ಸಭಾ ಚುನಾವ ಣೆ ಯ ಹಿನ್ನೆಲೆ ಯಲ್ಲಿ ಸಮು ದಾಯದ ಬೆಂಬ ಲವನ್ನು ಹಿಡಿದಿಟ್ಟುಕೊಳ್ಳಬೇಕಿದೆ. ಆಗ ರಾಜ್ಯದಲ್ಲಿ ಹೆಚ್ಚು ಸಂಸತ್ ಸ್ಥಾನ ಗೆಲ್ಲಲು ಸಾಧ್ಯ ಎಂದು ಶಿವಶಂಕರಪ್ಪ ಹೇಳಿದ್ದಾರೆ.

## ಈ ಬಾರಿ ಮುಂಗಾರು ವಿಳಂಬ

(1ನೇ ಪುಟದಿಂದ) ಮುನ್ಸೂಚನೆಯ ಪ್ರಕಾರ ಜೂನ್ 7ರಂದು ಕೇರಳಕ್ಕೆ ಮುಂಗಾರು ತಲುಪಲಿದೆ. ಮುಂಗಾರು ಈ ಬಾರಿ ವಿಳಂಬವಾಗಲಿದೆ. ದೇಶದ ಮಧ್ಯ ಹಾಗೂ ಉತ್ತರ ಭಾಗದಲ್ಲಿ ಜೂನ್ ತಿಂಗಳಿನಲ್ಲಿ ಬಿಸಿಲು ಇರಲಿದೆ ಎಂದು ಹವಾಮಾನ ಇಲಾಖೆ ಹೇಳಿದೆ. ಕಳೆದ ವರ್ಷ ಮುಂಗಾರು ಮೇ 29ರಂದು ಆರಂಭವಾಗಿತ್ತು. 2021ರಲ್ಲಿ ಜೂನ್ 3ರಂದು ಆರಂಭವಾಗಿತ್ತು. ಮುಂಗಾರು ಮಾರುತಗಳು ಕೇರಳ ತಲುಪುವುದನ್ನು, ಮುಂಗಾರು ಅವಧಿ ಆರಂಭ ಎಂದು ಪರಿಗಣಿಸಲಾಗುತ್ತದೆ.

## ಗುತ್ತಿಗೆ ಮೇಲೆ ಜಂಟಿ ಕಾರ್ಯದರ್ಶಿಗಳ ನೇಮಕಕ್ಕೆ ಕೇಂದ್ರ ಸರ್ಕಾರ ನಿರ್ಧಾರ

ನವದೆಹಲಿ, ಮೇ 16 – ಖಾಸಗಿ ವಲಯದ ಪರಿಣಿತರನ್ನು ಗುತ್ತಿಗೆ ಆಧಾರದ ಮೇಲೆ ಜಂಟಿ ಕಾರ್ಯದರ್ಶಿ, ನಿರ್ದೇಶಕ ಹಾಗೂ ಉಪ ಕಾರ್ಯದರ್ಶಿ ಹುದ್ದೆಗಳಿಗೆ ನೇಮಿಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕೇಂದ್ರದ 12 ಇಲಾಖೆಗಳು ಹಾಗೂ ಸಚಿವಾಲಯಗಳಲ್ಲಿ ಈ ರೀತಿಯ ಪರಿಣಿತರನ್ನು ನೇಮಕ ಮಾಡಿಕೊಳ್ಳುವಂತೆ ಯು.ಪಿ.ಎಸ್.ಸಿ.ಗೆ ಸಿಬ್ಬಂದಿ ಇಲಾಖೆ ತಿಳಿಸಿದೆ. ಸಾಮಾನ್ಯವಾಗಿ ಜಂಟಿ ಕಾರ್ಯದರ್ಶಿ, ನಿರ್ದೇಶಕ ಹಾಗೂ ಉಪ ಕಾರ್ಯದರ್ಶಿ ಹುದ್ದೆಗಳನ್ನು ಅಖಿಲ ಭಾರತ ಹಾಗೂ ಎ ಗುಂಪಿನ ಸೇವೆಗಳ ಅಧಿಕಾರಿಗಳ ಮೂಲಕ ಭರ್ತಿ ಮಾಡಲಾಗುತ್ತದೆ. ಈ ನೇಮಕಕ್ಕೆ ಸಂಬಂಧಿಸಿದಂತೆ ಯು.ಪಿ.ಎಸ್.ಸಿ. ವೆಬ್ ತಾಣದಲ್ಲಿ ಮೇ 20ರಂದು ವಿವರಗಳನ್ನು ಪ್ರಕಟಿಸಲಾಗುವುದು. ಆಸಕ್ತರು ಜೂನ್ 19ರವರೆಗೆ ಅರ್ಜಿ ಸಲ್ಲಿಸಬಹುದಾಗಿದೆ.

ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಒದಗಿಸುವ ಮಾಹಿತಿ ಆಧರಿಸಿ ಸಂದರ್ಶನಕ್ಕೆ ಕರೆಯಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಈ ಹಿಂದೆ ಜೂನ್ 2018ರಲ್ಲಿ ಹತ್ತು ಜಂಟಿ ಕಾರ್ಯದರ್ಶಿ ಹಂತದ ಹುದ್ದೆಗಳಿಗೆ ಖಾಸಗಿ ವಲಯದ ಪರಿಣಿತರನ್ನು ನೇಮಿಸಲಾಗಿತ್ತು.

## ಅರುಣಕುಮಾರಗೆ ಧೈರ್ಯ ತುಂಬಿದ ಕೆ.ಬಿ ಕೋಳಿವಾಡ



ರಾಣೇಬೆನ್ನೂರು, ಮೇ 16- ಚುನಾವಣೆಯಲ್ಲಿ ಸೋಲು-ಗೆಲುವು ಸಹಜ. ಎರಡನ್ನೂ ಸಮನಾಗಿ ಸ್ವೀಕರಿಸ ಬೇಕು ಎಂದು ಮಾಜಿ ಸಭಾಪತಿ ಕೆ.ಬಿ. ಕೋಳಿವಾಡರು ತಮ್ಮ ಮಗ ಕಾಂಗ್ರೆಸ್ ಅಭ್ಯರ್ಥಿ ಪ್ರಕಾಶರ ನೇರ ಪ್ರತಿಸ್ಪರ್ಧಿಯಾಗಿ ಪರಾಜಿತ ಗೊಂಡ ಬಿಜೆಪಿ ಅಭ್ಯರ್ಥಿ, ಮಾಜಿ ಶಾಸಕ ಅರುಣಕುಮಾರ ಪೂಜಾರ ಅವರ ಮನೆಗೆ ತೆರಳಿ ಧೈರ್ಯಯ ತುಂಬಿದರು.

ನಾನು 11 ಚುನಾವಣೆಗಳನ್ನು ಎದುರಿಸಿದ್ದೇನೆ. 6 ಚುನಾವಣೆಗಳಲ್ಲಿ ಜನರು ನನ್ನನ್ನು ತಿರಸ್ಕರಿಸಿದರು. 5 ಬಾರಿ ಆಶೀರ್ವದಿಸಿ ಜಯ ತಂದು ಕೊಟ್ಟರು. ಅವರ ಪ್ರೀತಿ ಹೆಚ್ಚಾದರೆ ಗೆಲ್ತೇವೆ. ಕಡಿಮೆ ಆದರೆ ಸೋಲ್ತೇವೆ. ಅವರ ಪ್ರೀತಿಗಳಿಸುವ ಪ್ರಯತ್ನದಲ್ಲಿ ನಾವಿರಬೇಕು. ಧೃತಿಗೆಡಬಾರದು ಎಂದು ಕೋಳಿವಾಡರು ಹೇಳಿದರು.

ಮುಂದೆ ಬರುವ ಒಳ್ಳೆಯ ದಿನಗಳಿಗೆ ಕಾಯಬೇಕು. ಸಂಘಟಿತರಾಗಿ ಭವಿಷ್ಯವನ್ನು ರೂಪಿಸಿಕೊಳ್ಳಬೇಕು. ಬರುವ ದಿನಗಳಲ್ಲಿ ನಿಮಗೆ ಒಳ್ಳೆಯದಾಗಲಿ ಎಂದು ಕೆ.ಬಿ. ಕೋಳಿವಾಡರು ಹರಸಿದರು. ಈ ಸಂದರ್ಭದಲ್ಲಿ ಅರುಣಕುಮಾರ ಪತ್ನಿ, ಜಿ.ಪಂ. ಮಾಜಿ ಸದಸ್ಯೆ ಮಂಗಳಗೌರಿ ಪೂಜಾರ, ಬಿಜೆಪಿ ಮುಖಂಡರಾದ ಸಿದ್ದಣ್ಣ ಚಿಕ್ಕಬಿದರಿ, ಶಿವಕುಮಾರ ಮತ್ತಿತರರಿದ್ದರು.

## ನಗರದ ತನಿಷ್ಕ್ ಶೋ ರೂಂನಲ್ಲಿ ವಿಶ್ವ ತಾಯಂದಿರ ದಿನಾಚರಣೆ



ದಾವಣಗೆರೆ, ಮೇ 16- ನಗರದ ತನಿಷ್ಕ್ ಜ್ಯೂಯಲರಿ ಶೋ ರೂಂನಲ್ಲಿ ಇತ್ತೀಚೆಗೆ ವಿಶ್ವ ತಾಯಂದಿರ ದಿನವನ್ನು ಆಚರಿಸಲಾಯಿತು.

ಶೋ ರೂಂನ ಮಾಲೀಕರಾದ ಜಾನ್ವಾರ ಜಾವಿದ್ ಮತ್ತು ಎ.ವಿ.ಕೆ. ಕಾಲೇಜಿನ ಪ್ರಾಂಶುಪಾಲರಾದ ಕಮಲ ಅವರು ದೀಪ ಬೆಳಗುವುದರ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು.

ಕಾರ್ಯಕ್ರಮದಲ್ಲಿ ಭಾಗ್ಯಮ್ಮ, ವ್ಯವಸ್ಥಾಪಕ ನಿರ್ದೇಶಕರಾದ ಅಬ್ರಹಾರ್, ಕೆ.ಜೆ.ಅಫಕ್ ರಜ್ವಿ, ವ್ಯವಸ್ಥಾಪಕರಾದ ಅಂಜಲಿ ಮತ್ತು ಇತರರು ಉಪಸ್ಥಿತರಿದ್ದರು.

## ವಿಶ್ವ ತಂಬಾಕು ರಹಿತ ದಿನ : ಪ್ರಬಂಧ ಸ್ಪರ್ಧೆ

ದಾವಣಗೆರೆ, ಮೇ 16- ಇದೇ ದಿನಾಂಕ 31 ರಂದು ನಡೆಯುವ ವಿಶ್ವ ತಂಬಾಕು ರಹಿತ ದಿನ-2023ರ ಅಂಗವಾಗಿ ಪ್ರಬಂಧ ಸ್ಪರ್ಧೆ ನಡೆಯಲಿದೆ.

ವಿಶ್ವ ಆರೋಗ್ಯ ಸಂಸ್ಥೆಯು ನಮಗೆ ಆಹಾರ ಬೇಕು, ತಂಬಾಕು ಬೇಡ ಎಂಬ ಘೋಷ ವಾಕ್ಯದೊಂದಿಗೆ ವಿಶ್ವ ತಂಬಾಕು ದಿನವನ್ನು ಆಚರಿಸಲಾಗುತ್ತಿದೆ. ತಂಬಾಕು ಬೆಳೆಯುವ ರೈತರಿಗೆ ಪರ್ಯಾಯ ಬೆಳೆ ಬೆಳೆಯಲು, ಬೆಳೆದ ಬೆಳೆಗಳಿಗೆ ಪ್ರೋತ್ಸಾಹ, ಉತ್ಪಾದನೆ ಮತ್ತು ಮಾರುಕಟ್ಟೆ ಅವಕಾಶಗಳ ಕುರಿತು ಅರಿವು ಮೂಡಿಸಲಾಗುವುದು. ಈ ವಿಷಯದ ಕುರಿತು ಜಿಲ್ಲೆಯಾದ್ಯಂತ ಪ್ರಬಂಧ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ.

ಆಸಕ್ತರು ಮನೆಯಿಂದಲೇ ಬರೆದ ಪ್ರಬಂಧವನ್ನು ಇದೇ ದಿನಾಂಕ 26 ರೊಳಗೆ ಖುದ್ದಾಗಿ/ಅಂಚೆ ಮೂಲಕ ಜಿಲ್ಲಾ ಸರ್ವೇಕ್ಷಣಾಧಿಕಾರಿಗಳ ಕಚೇರಿ, ಜಿಲ್ಲಾ ತಂಬಾಕು ನಿಯಂತ್ರಣ ಕೋಶ, ಸಿ.ಜಿ.ಆಸ್ಪತ್ರೆ ಆವರಣ, ದಾವಣಗೆರೆ ಇಲ್ಲಿಗೆ ಕಳುಹಿಸಬೇಕು.

ಸ್ಪರ್ಧೆಯಲ್ಲಿ ವಿಜೇತ 3 ಸ್ಪರ್ಧಿಗಳಿಗೆ ಜಿಲ್ಲಾಡಳಿತದಿಂದ ಬಹುಮಾನ ವಿತರಿಸಲಾಗುವುದು ಎಂದು ಜಿಲ್ಲಾ ಸರ್ವೇಕ್ಷಣಾಧಿಕಾರಿಗಳು ತಿಳಿಸಿದ್ದಾರೆ.

## ಶಾಸಕ ಹರೀಶ್ ಕ್ಷಮೆಯಾಚನೆ

(1ನೇ ಪುಟದಿಂದ) ಠಾಣೆಯ ಮುಂದೆ ಅಪಾರ ಸಂಖ್ಯೆಯಲ್ಲಿ ಜನ ಜಮಾಯಿಸಿದ್ದರು. ಸಂಜೆ ಠಾಣೆಗೆ ಆಗಮಿಸಿದ ಹರೀಶ್, ನಂತರ ಕ್ಷಮೆ ಯಾಚಿಸಿದರು.

ಒಳ ಮೀಸಲಾತಿ ಸೌಲಭ್ಯ ನೀಡಿದ್ದರೂ ನನಗೆ ಮತಗಳು ಕಡಿಮೆ ಬಂದ ಬಗ್ಗೆ ಕೋಪ ಬಂದಿತ್ತು. ರಕ್ತದೊತ್ತಡವೂ ಹಚ್ಚಾಗಿತ್ತು. ಈ ವೇಳೆ ಏನೋ ಮಾತನಾಡಿದ್ದೇನೆ. ನೋವಾಗಿದ್ದರೆ ಕ್ಷಮಿಸಿ ಎಂದು ಹರೀಶ್ ಕ್ಷಮೆ ಕೇಳಿದ್ದಾರೆ.


ಈ ವೇಳೆ ದಲಿತ ಸಮುದಾಯದ ಮುಖಂಡ ಹೆಚ್. ನಿಜಗುಣ, ಮಾಜಿ ಶಾಸಕ ಪ್ರೊ. ಲಿಂಗಣ್ಣ, ಬಿಜೆಪಿ ಮುಖಂಡ ಚಂದ್ರಶೇಖರ್ ಪೂಜಾರ್, ನಗರಸಭೆ ಸದಸ್ಯರಾದ ವಿರುಪಾಕ್ಷಪ್ಪ, ರಜನಿಕಾಂತ್ ಹನುಮಂತಪ್ಪ, ಕೊಟ್ರೇಶ್, ಬಿ.ಎನ್. ರಮೇಶ್, ನಾಗಭೂಷಣ, ಮಂಜುನಾಥ್ ಭಾನುವಳ್ಳಿ, ಎಂ.ಎಸ್.ಆನಂದ್, ಮೈಲಾರಪ್ಪ, ಪಿ.ಜೆ. ಮಹಾಂತೇಶ್ ಸಂತೋಷ ನೋಟದರ್ ಹಾಗೂ ಇತರರು ಹಾಜರಿದ್ದರು.


ಮಹಿಳಾ ಸೇವಾ ಸಮಾಜ (ರಿ.)

**ಮಹಿಳಾ ಸಮಾಜ ಪ್ರಥಮ ದರ್ಜೆ (ಪದವಿ) ಮಹಿಳಾ ಕಾಲೇಜು**

(ಕರ್ನಾಟಕ ರಾಜ್ಯ ಅಕ್ಕಮಹಾದೇವಿ ವಿಶ್ವವಿದ್ಯಾಲಯ, ವಿಜಯಪುರ ಇದರ ವ್ಯಾಪ್ತಿಗೆ ಒಳಪಟ್ಟು, ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದಿದೆ)

ಅಶೋಕ ರಸ್ತೆ, ದಾವಣಗೆರೆ-2. ಫೋನ್ : 08192-233010, 296684



**2023-24ನೇ ಶೈಕ್ಷಣಿಕ ವರ್ಷದ ಪದವಿ ತರಗತಿಗಳಿಗೆ ಪ್ರವೇಶ ಪ್ರಕಟಣೆ**

ವಿಷಯ ಸಂಯೋಜನೆಗಳು : ಭಾಷಾ ವಿಷಯಗಳು : ಕನ್ನಡ, ಇಂಗ್ಲಿಷ್, ಹಿಂದಿ.

ಐಚ್ಛಿಕ ವಿಷಯ ಸಂಯೋಜನೆಗಳು :

B.A. : ಇತಿಹಾಸ, ಸಮಾಜಶಾಸ್ತ್ರ (HS)
ಅರ್ಥಶಾಸ್ತ್ರ, ರಾಜ್ಯಶಾಸ್ತ್ರ (EP)
ಅರ್ಥಶಾಸ್ತ್ರ, ಇತಿಹಾಸ (EH)

B.Com : ಬ್ಯಾಚುಲರ್ ಆಫ್ ಕಾಮರ್ಸ್

B.C.A. : ವಿಶ್ವವಿದ್ಯಾನಿಲಯ ನಿಗಧಿಪಡಿಸಿದ ವಿಷಯಗಳು

95% 2021-22ನೇ ವರ್ಷದಲ್ಲಿ

ಕಡಿಮೆ ಶುಲ್ಕದಲ್ಲಿ ಉತ್ತಮ ಗುಣಮಟ್ಟದ ಶಿಕ್ಷಣ

ಕಾಲೇಜಿನ ವೈಶಿಷ್ಟತೆ :

- ಕಾಲೇಜ್ ನಗರದ ಮಧ್ಯಭಾಗದಲ್ಲಿದೆ. ಸುತ್ತಮುತ್ತ ಗ್ರಾಮೀಣ ಪ್ರದೇಶಗಳಿಂದ ಬರುವ ವಿದ್ಯಾರ್ಥಿಗಳಿಗೆ ಬಸ್ ನಿಲ್ದಾಣ ಮತ್ತು ರೈಲ್ವೆ ನಿಲ್ದಾಣಗಳಿಗೆ ಹತ್ತಿರದಲ್ಲಿರುತ್ತದೆ.
- ವಿಶಾಲವಾದ ಕಟ್ಟಡ
- ಸುಸಜ್ಜಿತವಾದ ಗ್ರಂಥಾಲಯ
- ಅನುಭವಿ ಉಪನ್ಯಾಸಕರಿಂದ ಬೋಧನೆ
- ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆಗಳು
- ಹೆಣ್ಣು ಮಕ್ಕಳಿಗೆ ವಿಶೇಷವಾದ ಭದ್ರತೆ ಹಾಗೂ ವೈಯಕ್ತಿಕ ಗಮನ
- ಮಾಸಿಕ ಪರೀಕ್ಷೆಗಳ ಮೂಲಕ ಪ್ರಗತಿಯೆಡೆಗೆ.

ಪ್ರವೇಶದ ಅರ್ಜಿಗಳನ್ನು ಬೆಳಿಗ್ಗೆ 10-30 ರಿಂದ 2-00 ಗಂಟೆಯವರೆಗೆ ವಿತರಿಸಲಾಗುವುದು.

ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ :
ರವಿಕುಮಾರ ಹೆಚ್.ಎಸ್. ಮೊ : 9980432468, ಬಸವೇಶ್ ವಿ.ಬಿ. ಮೊ : 9964005860

ಶ್ರೀಮತಿ ಕೆ.ಕೆ. ಸುಶೀಲಮ್ಮ, ಅಧ್ಯಕ್ಷರು
ಶ್ರೀಮತಿ ಜಯ್ಯಮ್ಮ ನೀಲಗುಂದ, ಕಾರ್ಯದರ್ಶಿ
ಶ್ರೀ ಎಂ. ಹೆಚ್. ಪ್ರಸನ್ನರೆಡ್ಡಿ, ಪ್ರಾಚಾರ್ಯರು ಮೊ : 9481867531

## 'ಚುನಾವಣೆ ಜಾಗೃತಿ ಹೆಜ್ಜೆ ಯಕ್ಷರಂಗದ ಗೆಜ್ಜೆ' ಅಭಿಯಾನ



ದಾವಣಗೆರೆ, ಮೇ 16 - ರಾಜ್ಯ ವಿಧಾನಸಭಾ ಚುನಾವಣೆ ಕುರಿತು ಮತದಾರರಿಗೆ ಅರಿವು ಮೂಡಿಸಲು 'ಚುನಾವಣೆ ಜಾಗೃತಿ ಹೆಜ್ಜೆ ಯಕ್ಷರಂಗದ ಗೆಜ್ಜೆ' ಬಾಲ ಯಕ್ಷಗಾನ ಕಲಾವಿದರಿಂದ ಕುಣಿತದೊಂದಿಗೆ ನೃತ್ಯ ರೂಪಕ ಸುಸಂಪನ್ನಗೊಂಡಿತು ಎಂದು ಸ್ಥಳೀಯ ಯಕ್ಷರಂಗ ಸಂಸ್ಥೆಯ ಸಂಸ್ಥಾಪಕ ಸಾಲಿಗ್ರಾಮ ಗಣೇಶ್ ಶೆಣೈ ತಿಳಿಸಿದರು.

ಯಕ್ಷಗಾನ ಕಲಾವಿದ ಹಟ್ಟಿಯಂಗಡಿ ಆನಂದಶೆಟ್ಟಿ ಅವರ ನಿರ್ದೇಶನದಲ್ಲಿ ಯಕ್ಷರಂಗದ ಪ್ರಧಾನ ಕಾರ್ಯದರ್ಶಿ, ಹವ್ಯಾಸಿ ಯಕ್ಷಗಾನ ಕಲಾವಿದ ಬೇಳೂರು ಸಂತೋಷ್ ಕುಮಾರ ಶೆಟ್ಟಿ ಅವರ ಸಹಯೋಗದಲ್ಲಿ ಕಲಾಕಂಚ ಕಛೇರಿ ಸಭಾಂಗಣದಲ್ಲಿ ಬಾಲ ಯಕ್ಷಗಾನ ಕಲಾವಿದರಾದ ಪ್ರತ್ಯಕ್ಷ, ವರ್ಷಿಣಿ ಯಕ್ಷಗಾನ ವೇಷದೊಂದಿಗೆ ಯಕ್ಷಗಾನ ನಾಟ್ಯಯಾನ ಕಾರ್ಯಕ್ರಮ ನಡೆಯಿತು.

ಯಕ್ಷರಂಗದ ಅಧ್ಯಕ್ಷರಾದ ಮಲ್ಯಾಡಿ ಪ್ರಭಾಕರ ಶೆಟ್ಟಿ, ಗೌರವ ಅಧ್ಯಕ್ಷರಾದ ಶಾಂತಪ್ಪ ಪೂಜಾರಿ, ಕಲಾಕುಂಚ ಮಹಿಳಾ ವಿಭಾಗದ ಅಧ್ಯಕ್ಷರಾದ ಹೇಮಾ ಶಾಂತಪ್ಪ ಪೂಜಾರಿ, ಗೌರವ ಅಧ್ಯಕ್ಷರಾದ ಶ್ರೀಮತಿ ವಸಂತಿ ಮಂಜುನಾಥ್, ಸಂಸ್ಥೆಗಳ ಸಕ್ರಿಯ ಸದಸ್ಯರಾದ ಪ್ರದೀಪ್ ಕಾರಂತ್, ಚನ್ನಬಸವ ಶೀಲವಂತ್, ಕೆ.ಸಿ. ಉಮೇಶ್, ಬಿ.ಎಸ್. ವೀರೇಶ್, ಶ್ರೀಮತಿ ರೇಣುಕಾ ರಾಮಣ್ಣ, ಗುರುಪಾದ ಬಾಬು ರಾಯಬಾಗ್ ಮುಂತಾದವರು ಉಪಸ್ಥಿತರಿದ್ದರು.

## ಗುರು-ಶಿಷ್ಯರ ಪುನರ್ಮಿಲನಕ್ಕೆ ಸಾಕ್ಷಿಯಾದ 'ಗುರುವಂದನೆ'



ದಾವಣಗೆರೆ, ಮೇ 15 - ಅದು ಗುರು-ಶಿಷ್ಯರ ಪುನರ್ ಮಿಲನದ ಸುಸಂದರ್ಭ. ಅಕ್ಷರ ಕಲಿಸಿ, ಜ್ಞಾನಾರ್ಜನೆ ಮಾಡಿಸಿದ ಗುರುಗಳಿಗೆ ಶಿಷ್ಯ ವೃಂದವೇ ನಮಿಸಿದರೆ, ತಮ್ಮಂತೆ ಸಮಾಜದಲ್ಲಿ ಬಹು ಎತ್ತರಕ್ಕೆ ಬೆಳೆದ ಶಿಷ್ಯ ವೃಂದವನ್ನು ಕಂಡು ಭಾವಪರವಶರಾದರು.

ಇಂತಹ ಹೃದಯಸ್ಪರ್ಶಿ ಭಾವ ಸಮ್ಮಿಲನಕ್ಕೆ ವೇದಿಕೆ ಕಲ್ಪಿಸಿದ್ದು ನಗರದ ಕುವೆಂಪು ಕನ್ನಡ ಭವನದಲ್ಲಿ ಸಿರಿಗೆರೆಯ ಬಿ. ಲಿಂಗಯ್ಯ ವಸತಿ ಪದವಿ ಪೂರ್ವ ಕಾಲೇಜಿನ ಪ್ರೌಢಶಾಲಾ ವಿಭಾಗದ ಹಿರಿಯ ವಿದ್ಯಾರ್ಥಿಗಳು ಆಯೋಜಿಸಿದ್ದ 'ಗುರುವಂದನಾ' ಕಾರ್ಯಕ್ರಮ.

ವಿವಿಧ ಕಡೆಗಳಿಂದ ಆಗಮಿಸಿದ ಹಿರಿಯ ವಿದ್ಯಾರ್ಥಿಗಳು ತಮಗೆ ಪಾಠ ಕಲಿಸಿದ ಗುರುಗಳನ್ನು ಗೌರವಿಸುವ ಮೂಲಕ ಧನ್ಯತೆ ಮೆರೆದು ಇತರರಿಗೆ ಮಾದರಿಯಾದರು. ಅಪರೂಪಕ್ಕೆ ಸಮ್ಮಿಲನಗೊಂಡ ಸಹಪಾಠಿಗಳೊಂದಿಗೆ ಶಾಲಾ ದಿನಗಳ ನೆನಪುಗಳನ್ನು ಮೆಲುಕು ಹಾಕಿ ಸಂತಸಪಟ್ಟರು.

ಇದೇ ಸಂದರ್ಭದಲ್ಲಿ ಅಧ್ಯಕ್ಷತೆ ವಹಿಸಿದ್ದ ತರಳಬಾಳು ಜಗದ್ಗುರು ವಿದ್ಯಾಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಪ್ರೊ. ಎಸ್.ಬಿ. ರಂಗನಾಥ್ ಮಾತನಾಡಿ, ಸಾಮಾಜಿಕವಾಗಿ ಮನಸ್ಸನ್ನು ಕೆರಳಿಸುವ ಕಾರ್ಯಗಳೇ ಎಲ್ಲೆಡೆ ಸೃಷ್ಟಿಯಾಗುವ ಸಂದರ್ಭದಲ್ಲಿ ಮನಸ್ಸನ್ನು ಅರಳಿಸುವ ಅವಕಾಶಗಳು ವಿರಳವಾಗಿವೆ ಎಂದರು.

ಸಿರಿಗೆರೆ ಜಗದ್ಗುರುಗಳ ದೂರದರ್ಶಿತ್ವದ ಕಲಾ, ವಿಜ್ಞಾನ ಸಂಗೀತ ಮೇಳೈಸಿದ ಶಿಕ್ಷಣದ ಪರಿಣಾಮ ಇಲ್ಲಿ ಓದಿದ ಎಲ್ಲಾ ವಿದ್ಯಾರ್ಥಿಗಳು ಸ್ಫೂರ್ತಿ ಪಡೆದು ಉತ್ತಮ ಸಂಸ್ಕಾರ ರೂಢಿಸಿಕೊಂಡು ದೇಶ-ವಿದೇಶಗಳಲ್ಲಿ ಬದುಕು ಕಟ್ಟಿಕೊಂಡಿದ್ದಾರೆಂದರು.

ಗುರುವಂದನೆ ಸ್ವೀಕರಿಸಿದ ಅಧ್ಯಾಪಕರೂ, ವಿದ್ಯಾರ್ಥಿ ನಿಲಯದ ನಿಲಯ ಪಾಲಕರಾಗಿದ್ದ ಎಸ್. ರೇವಣಸಿದ್ದಯ್ಯ ಮಾತನಾಡಿ, ವಿದ್ಯಾರ್ಥಿಗಳಲ್ಲಿ ಶಿಸ್ತು, ನಿಯಮ ಪಾಲನೆ, ಸಮಯ ಪರಿಪಾಲನೆ, ಹಲವು ಕೊರತೆಗಳ ನಡುವೆ ಜೀವನವನ್ನು ಸಮತೋಲನವಾಗಿ ಸ್ವೀಕರಿಸುವ ಶಿಕ್ಷಣವನ್ನು ನೀಡಿದ್ದೇವೆ. ಇದರ ಫಲವಾಗಿಯೇ ಇಂದು ನೀವೆಲ್ಲರೂ ಸಮಾಜದಲ್ಲಿ ಉನ್ನತ ಹುದ್ದೆಯನ್ನು ಅಲಂಕರಿಸಿದ್ದೀರಿ. ಸಮಾಜದಲ್ಲಿ ಯಶಸ್ಸು ಮತ್ತು ಕೀರ್ತಿಯನ್ನು ಹೊಂದಿದ್ದೀರಿ ಎಂದು ಹೇಳಿದರು.

ನೀವು ತೋರಿದ ಗುರುವಂದನೆ ಸಮಾಜದಲ್ಲಿ ಉಳಿಸಬಹು ದಾದ ಕೃತಜ್ಞತಾ ಮೌಲ್ಯವನ್ನು ಜೀವಂತವಾಗಿರಿಸಿದ್ದೀರಿ ಎಂದರು.

ಮತ್ತೊರ್ವ ಸನ್ಮಾನಿತರಾದ ಕೆ. ಹಾಲಪ್ಪ ಮಾತನಾಡಿ, ಗುರುವಂದನೆ ಗುರು ಶಿಷ್ಯರು ಪರಸ್ಪರ ಸಿಹಿ, ಕಹಿಗಳನ್ನು ಹಂಚಿಕೊಳ್ಳುವ ಶುಭ ಸಂದರ್ಭ. ನಿಮ್ಮ ಸನ್ಮಾನ ನಮ್ಮ ಆಯುಷ್ಯ, ಆರೋಗ್ಯವನ್ನು ವೃದ್ಧಿಸಿದಂತಾಗಿದೆ. ಗುರುವರ್ಗ ನಿಮಗೆ ಆಭಾರಿಯಾಗಿದೆ. ಗುರುವಿಗೆ ಸ್ಥಾನವನ್ನು ತಂದು ಕೊಟ್ಟ ರಾಷ್ಟ್ರಪತಿ ಎಸ್ ರಾಧಾಕೃಷ್ಣನ್ ಅವರನ್ನು ಸ್ಮರಿಸಿದರು.

ಸನ್ಮಾನ ಸ್ವೀಕರಿಸಿದ ಎನ್. ಜಯಪ್ಪ, ಟಿ.ಎಂ. ಪರಮೇಶ್ವರಯ್ಯ, ಹೆಚ್. ಎಸ್. ಪಾಟೀಲ್, ಆರ್.ಸಿ. ಕೃಷ್ಣಮೂರ್ತಿ ಶೆಟ್ಟಿ, ಸಿ. ಶಿವಾನಂದಪ್ಪ ಮಾತನಾಡಿದರು.

ಹಿರಿಯ ವಿದ್ಯಾರ್ಥಿಗಳಲ್ಲಿ ಕಡ್ಲೆಬಾಳು ಬಿ.ಬಿ. ಸಿದ್ದೇಶ್, ಡಾ. ಸಿ.ಎಲ್. ಶಿವಮೂರ್ತಿ, ಡಾ.ಶ್ರೀನಿವಾಸ್, ಯಶಸ್ವಿನಿ ಹೆಗಡೆ, ಕಿರಣ್ ಕುಮಾರ್ ಸಜ್ಜನ್ ಅವರು ಅಂದಿನ ವಿದ್ಯಾರ್ಥಿ ಜೀವನದ ಸವಿನೆನಪುಗಳನ್ನು ಮೆಲುಕು ಹಾಕಿದರು.

ಜಿ.ಎನ್. ವಿಜಯಕುಮಾರ್ ಸ್ವಾಗತಿಸಿದರು, ಪ್ರಾಸ್ತಾವಿಕ ನುಡಿ ಶಿವಕುಮಾರ್ ಬಂದೋಜಿ, ಕುಮಾರ ವಂದಿಸಿದರು. ಎನ್. ಪ್ರಕಾಶ್ ಕಾರ್ಯಕ್ರಮ ನಿರೂಪಿಸಿದರು. ಕಾರ್ಯಕ್ರಮದಲ್ಲಿ ಕೊನೆಗೆ ಸಾಂಸ್ಕೃತಿಕ ಕಾರ್ಯಕ್ರಮ ಜರುಗಿತು. ನಿವೃತ್ತ ಪ್ರಾಚಾರ್ಯ ನಾ. ಲೋಕೇಶ್ ಒಡೆಯರ್, ಪ್ರೊ. ಎಸ್.ಬಿ. ಬಸವರಾಜ್, ಕುಮಾರಸ್ವಾಮಿ ಮತ್ತಿತರರು ಇದ್ದರು.

## ಜೊಂಡಿನ ಹುಲ್ಲುಗಾವಲಾಗುತ್ತಿರುವ ಕುಂದುವಾಡ ಕೆರೆ

**ಓದುಗರ ಪತ್ರ**



ಮಾನ್ಯರೇ,

ದಾವಣಗೆರೆ ಸ್ಮಾರ್ಟ್‌ಸಿಟಿಯ ಕಾರ್ಯಗಳು ಏನೆಂದರೆ ರಸ್ತೆ, ಚರಂಡಿ, ಫುಟ್‌ಪಾತ್ ನಿರ್ಮಿಸುವುದು, ನಂತರ ಜಲಸಿರಿ ಎಂದು ರಸ್ತೆ ಅಗೆದು ಗುಂಡಿಗಳನ್ನು ನಿರ್ಮಿಸುವುದು ಎಂದು ಈವರೆಗೂ ತಪ್ಪು ತಿಳಿದುಕೊಂಡಿದ್ದೆವು. ಆದರೆ ಇದನ್ನು ಸುಳ್ಳು ಮಾಡುವಂತೆ ಸ್ಮಾರ್ಟ್‌ಸಿಟಿಯವರು ಜೊಂಡಿನ ಹುಲ್ಲುಗಾವಲು ಬೆಳೆಸುತ್ತಿರುವುದು. ಅದು 15 ಕೋಟಿ ಅಂದಾಜು ವೆಚ್ಚದಲ್ಲಿ ಅದು ಎಲ್ಲಿದೆ ಎಂದು ಗೂಗಲ್ ಸರ್ಚ್ ಮಾಡಲು ಹೋಗದಿರಿ, ಅದನ್ನು ಗೂಗಲ್‌ನಲ್ಲಿ ಇನ್ನು ಅಪ್ಲೋಡ್ ಮಾಡಿಲ್ಲ. ಹಾಗಾದರೆ ಇದು ಎಲ್ಲಿದೆ ಎಂದು ತಲೆ ಕೆರೆದುಕೊಳ್ಳಬೇಡಿ. ಈ ಹುಲ್ಲುಗಾವಲು ಇರುವುದು ಕುಂದುವಾಡ ಕೆರೆಯಲ್ಲಿ, ಈ ಕೆರೆಯಲ್ಲಿ ಸುಮಾರು 10 ರಿಂದ 15 ಅಡಿ ಎತ್ತರದಲ್ಲಿ ಜೊಂಡು ಬೆಳೆದು ಪೂರ್ಣ ಕೆರೆಯನ್ನು ಆಕ್ರಮಿಸಿಕೊಳ್ಳುವ ಹಂತದಲ್ಲಿದೆ. ಇಲ್ಲಿ ಸಂಗ್ರಹವಾಗಿರುವ ಅಲ್ಪ ಪ್ರಮಾಣದ ನೀರೂ ಸಹ ಪಾಚಿಗಟ್ಟಿ ತೇಲುತ್ತಿದೆ. ಇದು ಸ್ಮಾರ್ಟ್‌ಸಿಟಿಯವರಿಗೆ ಕಾಣುತ್ತಿಲ್ಲವೇ ಅಥವಾ ಜಾಣ ಕುರುಡೇ?

ಕೆರೆಯ ಪುನರುಜ್ಜೀವನಗೊಳಿಸುವ ಯೋಜನಾ ನಕ್ಷೆಯನ್ನು ಯಾರಿಗೂ ತೋರಿಸದಂತೆ ಕಾರ್ಯ ಪ್ರಾರಂಭಿಸಿದ್ದು, ಮೊದಲ ಹಂತದಲ್ಲಿ ಹೂಳೆತ್ತಲು ಶುರು ಹಚ್ಚಿಕೊಂಡರು. ನಂತರ ಕೆರೆಯ ಇಕ್ಕೆಲಗಳಲ್ಲಿದ್ದ ಮರಗಳ ಹನನ ಕಾರ್ಯದೊಡನೆ ನಗರದ ಸಾರ್ವಜನಿಕರಿಂದ ದೇಣಿಗೆ ಪಡೆದು ನಿರ್ಮಿಸಿದ್ದ ಬೆಂಚುಗಳನ್ನು ಕೆರೆ ಮಧ್ಯ ಭಾಗದಲ್ಲಿನ ಮಂಟಪಕ್ಕೆ ತಳ್ಳಿದರು. ಈಗ ಅವು ಒಂದು ಸುಸ್ಥಿತಿಯಲ್ಲಿ ಇಲ್ಲ. ಸೈಕಲ್ ಪಾತ್‌ಗಾಗಿ ಕೆರೆಯ ಒಳಭಾಗದ ವಿಸ್ತೀರ್ಣ ಕಡಿಮೆಯಾಯಿತು. ಈಗ ನ್ಯಾಯಾಲಯದ ಆದೇಶದಂತೆ ಸೈಕಲ್ ಪಾತ್ ಮಾಯವಾಗಿ, ಅದೇ ಜಾಗದಲ್ಲಿ ಹೂವಿನ ಸಸಿಗಳನ್ನು ಬೆಳೆಸುತ್ತಿದ್ದಾರೆ. ಈ ಸಸಿಗಳನ್ನು ಸಂರಕ್ಷಿಸಲು ಯಾವ ಪೋತಪ್ಪ ನಾಯಕನು ಕಂಡು ಬರುತ್ತಿಲ್ಲ. ಮುಂದಿನ ದಿನಗಳಲ್ಲಿ ಇಲ್ಲಿಗೆ ಹೂಗಳ್ಳರು ದಾಳಿ ಇಡಲಿದ್ದಾರೆ. ಯುಗಾದಿ ಹಬ್ಬ ಬಂದರಂತು ಇಲ್ಲಿನ ಬೇವಿನ ಮರಗಳಲ್ಲಿ ಒಂದು ಎಲೆ ಇಲ್ಲದಂತೆ ಬೋಳಿಸಿ ಬಿಡುತ್ತಾರೆ.

ಈ ಹಿಂದೆ ಕೆರೆ ನಿರ್ಮಿಸಿದಾಗ ಸಿಮೆಂಟಿನ ಆನೆ, ಜಿಂಕೆ, ಹಸು, ಮಾನವರ ಕಲಾಕೃತಿಗಳನ್ನು ನಿರ್ಮಿಸಿದ್ದರು. ಆದರೆ ಈಗ ಕೆರೆಯ ಪುನರುಜ್ಜೀವನದ ನೆಪದಲ್ಲಿ ಇವುಗಳನ್ನು ಒಡೆದು ಹಾಕಿದ್ದಾರೆ. ಕೆಲವೊಂದನ್ನು ಎಂ.ಬಿ.ಎ ಕಾಲೇಜಿನ ಗೋಡೆ ಕಡೆಗೆ ದಬ್ಬಿದ್ದಾರೆ ಹಾಗೂ ಹನನ ಮಾಡಿದ ಮರಗಳಿಗೆ ಬದಲಾಗಿ, ಹೊಸದಾಗಿ ಒಂದೂ ಮರ ಗಿಡಗಳನ್ನು ನೆಟ್ಟಿರುವುದಿಲ್ಲ. ದಾವಣಗೆರೆಯ ಪರಿಸರವಾದಿಗಳೇ ಎಲ್ಲಿ ನಾಪತ್ತೆಯಾಗಿದ್ದೀರಿ?

ಈಗ ಕೆರೆಯ ಮೇಲೆ ಬೆಳಿಗ್ಗೆ-ಸಂಜೆ ಸಾವಿರಾರು ಜನರು ವಾಯುವಿಹಾರಕ್ಕೆ ಬರುತ್ತಾರೆ. ಆದರೆ ಅವರಿಗೆ ಒಂದು ಎಚ್ಚರಿಕೆ ನೀಡಬಯಸುತ್ತೇನೆ. ವಾಯುವಿಹಾರಕ್ಕೆ ಬರುವ ಮುನ್ನ ನೀರು ಕುಡಿದು ಬರಬೇಡಿ, ಏಕೆಂದರೇ ಪ್ರಕೃತಿ ಕರೆ ಬಂದರೇ ಗಂಡಸರು ಕಳ್ಳರಂತೆ ಅತ್ತಿತ್ತ ನೋಡಿ ಕೆರೆಯ ಇನ್ನೊಂದು ಪಕ್ಕದಲ್ಲಿ ಮೂತ್ರಬಾಧೆಯನ್ನು ತೀರಿಸಿಕೊಳ್ಳುತ್ತಾರೆ. ಆದರೆ ಹೆಂಗಸರು ಏನು ಮಾಡಬೇಕೆಂದು ಸ್ಮಾರ್ಟ್‌ಸಿಟಿಯ ಬೃಹಸ್ಪತಿಗಳು ತಿಳಿಸುತ್ತಾರೋ ಹೇಗೆ? ನಮ್ಮ ರಾಜಕೀಯ ಮುಖಂಡರು ತಮ್ಮ ಅಳಿವು, ಉಳಿವಿಗಾಗಿ ಚುನಾವಣೆಯನ್ನು ಎದುರಿಸುತ್ತಿದ್ದು, ಈ ಬಗ್ಗೆ ಗಮನ ಹರಿಸಲು ಸಮಯವೇ ಇಲ್ಲವಾಗಿದೆ.

2018ರ ಸಾಲಿನಲ್ಲಿ ಕೆರೆಯಲ್ಲಿ ಸುಮಾರು 1.95 ಕೋಟಿ ವೆಚ್ಚದಲ್ಲಿ ಕಾರಂಜಿಗಳನ್ನು ನಿರ್ಮಿಸಿದ್ದರು. ಅವುಗಳಿಂದ ನೀರು ಚಿಮ್ಮಿದ್ದನ್ನು ಯಾರು ನೋಡಿದ್ದಾರೋ ಏನೋ ಗೊತ್ತಿಲ್ಲ. ಆದರೆ ಈಗ ಒಂದು ಕಾರಂಜಿಯ ಅಸ್ಥಿಪಂಜರ ಹಲ್ಲು ಕಿರಿಯುತ್ತಾ ನಿಂತಿದೆ. ಈ ಸೌಭಾಗ್ಯಕ್ಕೆ ಸಾರ್ವಜನಿಕರ ಹಣ ಪೋಲು. ಈಗ ಮಳೆಗಾಲ ಶುರುವಾದರೆ ವಾಯು ವಿಹಾರಿಗಳಿಗೆ ನಿಲ್ಲಲು ಸರಿಯಾದ ತಾಣಗಳಿಲ್ಲ, ಆದ್ದರಿಂದ ಸ್ಮಾರ್ಟ್‌ಸಿಟಿಯವರೇ ಸ್ವಲ್ಪ ಸಮಯ ಮಾಡಿಕೊಂಡು ಈ ಎಲ್ಲಾ ಸಮಸ್ಯೆಗಳ ಬಗ್ಗೆ ಗಮನಹರಿಸಿ, ಇಲ್ಲದಿದ್ದರೆ ನಗರದ ಸಾರ್ವಜನಿಕರ, ವಾಯುವಿಹಾರಿಗಳ, ಪರಿಸರವಾದಿಗಳ ಶಾಪಕ್ಕೆ ಗುರಿಯಾಗುತ್ತೀರಿ.

-ಮನು,, ಎಂಸಿಸಿ ಬಿ ಬ್ಲಾಕ್ ನಿವಾಸಿ, ದಾವಣಗೆರೆ.

## ಎಸ್ಸೆಸ್, ಎಸ್ಸೆಸ್ಸೆಮ್ ಗೆಲುವಿಗೆ ಹಣ್ಣು, ಕಾಯಿ, ಪ್ರಸಾದ ನೀಡುವ ಹರಕೆ



ದಾವಣಗೆರೆ, ಮೇ 16- ದಕ್ಷಿಣ ಮತ್ತು ಉತ್ತರ ವಿಧಾನಸಭಾ ಕ್ಷೇತ್ರದ ಅಭ್ಯರ್ಥಿಗಳಾದ ಶಾಮನೂರು ಶಿವಶಂಕರಪ್ಪ ಹಾಗು ಎಸ್.ಎಸ್. ಮಲ್ಲಿಕಾರ್ಜುನ್ ಅವರ ಗೆಲುವಿನ ಹಿನ್ನೆಲೆಯಲ್ಲಿ ಜಿಲ್ಲೆಯ ಲಾಸ್ಯ ಫೌಂಡೇಶನ್ ಹಾಗೂ ಎಸ್ಸೆಸ್ಸೆಮ್ ಅಭಿಮಾನಿಗಳ ಬಳಗದ ವತಿಯಿಂದ ನಗರದ ರಾಮ್ ಅಂಡ್ ಕೋ ಸರ್ಕಲ್ ಬಳಿ ಇರುವ ಗಣೇಶ ದೇವಸ್ಥಾನದಲ್ಲಿ 501 ಭಕ್ತರಿಗೆ ಹಣ್ಣು, ಕಾಯಿ, ಪ್ರಸಾದ ನೀಡುವ ಹರಕೆ ತೀರಿಸಲಾಯಿತು.

ಲಾಸ್ಯ ಫೌಂಡೇಶನ್ ಸಂಸ್ಥಾಪಕರೂ, ಜಿಲ್ಲಾ ಕಾಂಗ್ರೆಸ್ ಎಸ್ಸಿ ಘಟಕದ ಸಂಘಟನಾ ಕಾರ್ಯದರ್ಶಿ, ಪತ್ರಕರ್ತ ಆರ್. ಸೂರ್ಯಪ್ರಕಾಶ್ ಹಣ್ಣು, ಕಾಯಿ, ಪ್ರಸಾದ ನೀಡುವ ಹರಕೆ ಹೊತ್ತಿದ್ದರು.

ಈ ಸಂದರ್ಭದಲ್ಲಿ ಲಾಸ್ಯ ಫೌಂಢೇಶನ್ ಪದಾಧಿಕಾರಿಗಳು, ಎಸ್. ಎಸ್. ಮಲ್ಲಿಕಾರ್ಜುನ್ ಅಭಿಮಾನಿಗಳು, ಕಾಂಗ್ರೆಸ್ ಕಾರ್ಯಕರ್ತರು ಭಾಗವಹಿಸಿದ್ದರು.

## ಮಣ್ಣಿನ ಪರೀಕ್ಷೆಯನ್ನು ಮಾಡಿಸಿ

### ಜಗಳೂರಿನಲ್ಲಿ ಬೇಸಾಯ ತಜ್ಞ ಮಲ್ಲಿಕಾರ್ಜುನ್ ಸಲಹೆ




ದಾವಣಗೆರೆ, ಮೇ 16- ಮೂರು ವರ್ಷಕ್ಕೆ ಒಮ್ಮೆ ಮಣ್ಣಿನ ಪರೀಕ್ಷೆ ಮಾಡಿಸಿಕೊಳ್ಳುವುದು ಬಹಳ ಸೂಕ್ತ. ಮಣ್ಣಿನ ಪರೀಕ್ಷೆಯ ಆಧಾರದ ಮೇಲೆ ರಸ ಗೊಬ್ಬರಗಳನ್ನು ಬಳಸುವುದರಿಂದ ಗೊಬ್ಬರದ ಮೇಲೆ ಆಗುವ ಖರ್ಚನ್ನು ಕಡಿಮೆ ಮಾಡಬಹುದು. ಹೆಚ್ಚು ಹೆಚ್ಚು ರಾಸಾಯನಿಕ ಗೊಬ್ಬರವನ್ನು ಬಳಸಿ, ಮಣ್ಣಿನ ಫಲವತ್ತತೆ ಕಡಿಮೆಯಾಗುತ್ತಿದೆ. ರೈತ ಬಾಂಧವರು ಮಣ್ಣಿನ ಪರೀಕ್ಷೆ ಮಾಡಿಸುವ ಮೂಲಕ ಮಣ್ಣಿನ ಫಲವತ್ತತೆಯನ್ನು ಕಾಪಾಡಿಕೊಳ್ಳಬಹುದು ಎಂದು ಬೇಸಾಯ ತಜ್ಞ ಮಲ್ಲಿಕಾರ್ಜುನ್ ತಿಳಿಸಿದರು.

ಅವರು ಐಸಿಎಆರ್ ತರಳಬಾಳು ಕೃಷಿ ವಿಜ್ಞಾನ ಕೇಂದ್ರ ಹಾಗೂ ರಾಷ್ಟ್ರೀಯ ಕೆಮಿಕಲ್ ಫರ್ಟಿಲೈಜರ್ಸ್, ದಾವಣಗೆರೆ ಇವರ ಸಂಯುಕ್ತಾಶ್ರಯದಲ್ಲಿ ಜಗಳೂರು ತಾಲ್ಲೂಕಿನ ಕಟ್ಟಿಗೆಹಳ್ಳಿ ಗ್ರಾಮದಲ್ಲಿ ಏರ್ಪಡಿಸಿದ್ದ ಮಣ್ಣಿನ ಪರೀಕ್ಷೆಯ ಆಂದೋಲನ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದು ಮಾತನಾಡಿದರು.

ಮಣ್ಣಿನ ವಿಜ್ಞಾನಿ ಹೆಚ್.ಎಂ. ಸಣ್ಣ ಗೌಡ ಮಾತನಾಡಿ, ಮಣ್ಣಿನ ಪರೀಕ್ಷೆಯ ಮಾದರಿಯನ್ನು ಯಾವ ರೀತಿ ತೆಗೆದುಕೊಳ್ಳಬೇಕು ಎಂದು ಪ್ರಾತ್ಯಕ್ಷಿಕೆಯ ಮೂಲಕ ತೋರಿಸಿಕೊಟ್ಟರು. ರೈತ ಬಾಂಧವರು ಮಣ್ಣು ಮಾದರಿಯನ್ನು ತೆಗೆದುಕೊಳ್ಳುವಾಗ ವಹಿಸಬೇಕಾದ ಮುಂಜಾಗ್ರತಾ ಕ್ರಮಗಳ ಬಗ್ಗೆ ಸವಿಸ್ತಾರವಾಗಿ ತಿಳಿಸಿದರು.

ಕಾರ್ಯಕ್ರಮದಲ್ಲಿ ವಿಸ್ತರಣಾ ತಜ್ಞ ರಘುರಾಜ್, ಕುಲಭೂಷಣ್, ಬಿದರಕೆರೆ ತರಳಬಾಳು ಅಮೃತ ರೈತರ ಉತ್ಪಾದಕ ಕಂಪನಿಯ ಅಧ್ಯಕ್ಷ ಮಂಜುನಾಥ್, ಉಪಾಧ್ಯಕ್ಷ ಸೋಮನಗೌಡ ಹಾಗೂ ಕಟ್ಟಿಗೆಹಳ್ಳಿಯ ಪ್ರಗತಿಪರ ರೈತರು ಹಾಗೂ ರೈತ ಮಹಿಳೆಯರು ಉಪಸ್ಥಿತರಿದ್ದರು.

## ಶಾಮನೂರಿಗೆ ಸಿಎಂ ಹುದ್ದೆ ನೀಡಲು ಗಡಿಗುಡಾಳ್ ಮನವಿ

ದಾವಣಗೆರೆ, ಮೇ 16- ಅಖಿಲ ಭಾರತ ವೀರಶೈವ ಮಹಾಸಭಾದ ರಾಷ್ಟ್ರಾಧ್ಯಕ್ಷ ಶಾಮನೂರು ಶಿವಶಂಕರಪ್ಪ ಅವರನ್ನು ಸಿಎಂ ಆಗಿ ನೇಮಕ ಮಾಡಬೇಕು. ಮಾಜಿ ಸಚಿವ ಎಸ್. ಎಸ್. ಮಲ್ಲಿಕಾರ್ಜುನ್ ಅವರಿಗೆ ಕ್ಯಾಬಿನೆಟ್ ದರ್ಜೆ ಸಚಿವ ಸ್ಥಾನ ನೀಡಬೇಕು ಎಂದು ಮಹಾನಗರ ಪಾಲಿಕೆ ವಿರೋಧ ಪಕ್ಷದ ಮಾಜಿ ನಾಯಕ ಗಡಿಗುಡಾಳ್ ಮಂಜುನಾಥ್ ಮನವಿ ಮಾಡಿದ್ದಾರೆ.

93 ವರ್ಷ ವಯಸ್ಸಿನ ಕಾಂಗ್ರೆಸ್‌ನ ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ, ಯಾವುದೇ ಅಧಿಕಾರಕ್ಕೆ ಆಸೆ ಪಟ್ಟವರಲ್ಲ. ಇದುವರೆಗೆ ವಿಧಾನಸಭೆ ಚುನಾವಣೆಯಲ್ಲಿ ಸೋಲಿಲ್ಲದ ಸರದಾರ ಎನಿಸಿಕೊಂಡಿದ್ದಾರೆ. ಈ ಬಾರಿ ವೀರಶೈವ ಲಿಂಗಾಯತ ಶಾಸಕರು ಕಾಂಗ್ರೆಸ್‌ನಿಂದ ಹೆಚ್ಚಾಗಿ ಆಯ್ಕೆಯಾಗಿದ್ದಾರೆ. ಹಾಗಾಗಿ ಶಾಮನೂರು ಶಿವಶಂಕರಪ್ಪನವರಿಗೆ ಸಿಎಂ ಸ್ಥಾನ ನೀಡುವ ಮೂಲಕ ಗೌರವ ನೀಡಬೇಕು ಎಂದು ಒತ್ತಾಯಿಸಿದ್ದಾರೆ.

ದಾವಣಗೆರೆ ಜಿಲ್ಲೆಯ ಅಭಿವೃದ್ಧಿಗೆ ಸಾಕಷ್ಟು ಕೊಡುಗೆ ನೀಡಿರುವ ಎಸ್. ಎಸ್. ಮಲ್ಲಿಕಾರ್ಜುನ್ ಅವರಿಗೆ ಒಳ್ಳೆಯ ಖಾತೆ ನೀಡಬೇಕು, ಕ್ಯಾಬಿನೆಟ್ ದರ್ಜೆಯ ಸ್ಥಾನಮಾನ ನೀಡಬೇಕು ಎಂದು ಅವರು ಆಗ್ರಹಿಸಿದ್ದಾರೆ.

## ಲತಾ ಗೆಲುವಿಗೆ ವೀಣಾ ಮಹಾಂತೇಶ್ ವಿಜಯೋತ್ಸವ



ಹರಪನಹಳ್ಳಿ, ಮೇ 16- ಹರಪನಹಳ್ಳಿ ವಿಧಾನಸಭಾ ಕ್ಷೇತ್ರದ ನೂತನ ಶಾಸಕರಾಗಿ ಆಯ್ಕೆಯಾಗಿರುವ ಎಂ.ಪಿ. ಲತಾ ಮಲ್ಲಿಕಾರ್ಜುನ್ ಅವರ ಗೆಲುವಿಗೆ ಅವರ ಸಹೋದರಿ ಎಂ.ಪಿ. ಪ್ರಕಾಶ್ ಸಮಾಜಮುಖಿ ಟ್ರಸ್ಟ್‌ನ ಅಧ್ಯಕ್ಷರಾದ ಎಂ.ಪಿ. ವೀಣಾ ಮಹಾತೇಶ್ ಅವರು ತಮ್ಮ ಜನಸಂಪರ್ಕ ಕಛೇರಿಯಲ್ಲಿ ಅವರ ಅಭಿಮಾನಿಗಳ, ಕಾರ್ಯಕರ್ತರ ಜೊತೆಗೂಡಿ ಕೇಕ್ ಕತ್ತರಿಸುವ ಮೂಲಕ ವಿಜಯೋತ್ಸವ ಆಚರಿಸಿ, ಸಿಹಿ ಹಂಚಿ ಸಂಭ್ರಮಿಸಿದರು.

ಈ ವೇಳೆ ಮಾತನಾಡಿದ ವೀಣಾರವರು, ನಮ್ಮ ಕುಟುಂಬವು ಮೂರನೇ ತಲೆಮಾರಿನ ರಾಜಕಾರಣವನ್ನು ಮಾಡಿಕೊಂಡು, ಈ ನಾಡಿಗಾಗಿ ಸೇವೆಯನ್ನು ಮಾಡುತ್ತಾ ಬಂದಿದೆ. ನಾವು ಕೂಡಾ ತಾಲ್ಲೂಕಿನ ಜನರ ಕಷ್ಟ - ಸುಖದಲ್ಲಿ ಭಾಗಿಯಾಗಿದ್ದೇವೆ. ನಮ್ಮ ಸಹೋದರ ಎಂ.ಪಿ. ರವೀಂದ್ರ ಅವರು ಕೂಡಾ ಈ ತಾಲ್ಲೂಕಿನಲ್ಲಿ ಶಾಸಕರಾಗಿ ಉತ್ತಮವಾದಂತಹ ಅಭಿವೃದ್ಧಿ ಕೆಲಸಗಳನ್ನು ಮಾಡಿದ್ದಾರೆ. ಈಗ ನನ್ನ ಸಹೋದರಿ ಎಂ.ಪಿ. ಲತಾ ಮಲ್ಲಿಕಾರ್ಜುನ್ ಸಹ ಶಾಸಕರಾಗಿ ಆಯ್ಕೆಯಾಗಿದ್ದಾರೆ. ನಮ್ಮ ಕುಟುಂಬದ ಮೇಲೆ ಗೌರವ ಇಟ್ಟು ಪಕ್ಷೇತರವಾಗಿ ಸ್ಪರ್ಧಿಸಿದ್ದರೂ ಸಹ ಹೆಣ್ಣುಮಕ್ಕಳು ಎಂಬ ಅನುಕಂಪದಿಂದಲೂ ಸಹ ನಮಗೆ ಅತಿ ಹೆಚ್ಚು ಮತ ಹಾಕಿ ಅತ್ಯುನ್ನತ ಜಯ ಕೊಡುವಲ್ಲಿ ಈ ತಾಲ್ಲೂಕಿನ ಜನರು ಪ್ರಮುಖ ಪಾತ್ರ ವಹಿಸಿದ್ದೀರಿ. ನಿಮ್ಮೆಲ್ಲರಿಗೂ ಅಭಿನಂದನೆಗಳನ್ನು ತಿಳಿಸಲು ಬಯಸುತ್ತೇನೆ ಎಂದರು.

ಈ ಸಂದರ್ಭದಲ್ಲಿ ಎಂ.ಪಿ. ವೀಣಾ ಮಹಾಂತೇಶ್ ಅವರ ಅಭಿಮಾನಿಗಳು, ಕಾರ್ಯಕರ್ತರು, ನಾಗರಿಕರು ಉಪಸ್ಥಿತರಿದ್ದರು.


ಮಹಿಳಾ ಸೇವಾ ಸಮಾಜ (ರಿ.)

**ಶ್ರೀಮತಿ ಟಿ.ಎಂ. ಚಿನ್ನಮ್ಮ ಶ್ರೀ ಮಹೇಶ್ವರಯ್ಯ ಮೆಮೋರಿಯಲ್ ಪದವಿ ಪೂರ್ವ ಕಾಲೇಜು**

(ಕರ್ನಾಟಕ ಸರ್ಕಾರಿಂದ ಮಾನ್ಯತೆ ಪಡೆದಿದೆ), ಅಶೋಕ ರಸ್ತೆ, ದಾವಣಗೆರೆ-2, ಫೋನ್ : 08192-233010


**2022-23ನೇ ಸಾಲಿನ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ 95% ಫಲಿತಾಂಶ.**

ವಾಣಿಜ್ಯ ವಿಭಾಗ 99%

ಡಿಸ್ಟಿಂಕ್ಷನ್ - 07
ಪ್ರಥಮ ದರ್ಜೆ - 17
ದ್ವಿತೀಯ ದರ್ಜೆ - 09

ಕಲಾ ವಿಭಾಗ 95%

ವಾಣಿಜ್ಯ ವಿಭಾಗ | ಕಲಾ ವಿಭಾಗ



| 92% ಭಾವನ.ಎನ್ | 92% ಮಹಾದೇವಿ.ಎನ್ | 90% ಸಂಜನ ಸೋಮಪ್ಪ | 90% ಮಂಗಳಗೌರಿ.ಎ | 88% ದೀಪಿಕಾ.ಯು | 85% ಪ್ರಿಯಾ ಎಂ.ಎನ್ | 88% ತೇಜಸ್ವಿನಿ.ಎಂ |
|---|---|---|---|---|---|---|
| ಲೆಕ್ಕಶಾಸ್ತ್ರ - 99 | ಕನ್ನಡ - 98 | ಕನ್ನಡ - 96 | ಕನ್ನಡ - 99 | ಕನ್ನಡ - 98 | ಲೆಕ್ಕಶಾಸ್ತ್ರ - 95 | ಶಿಕ್ಷಣಶಾಸ್ತ್ರ - 96 |
| ಗಣಕವಿಜ್ಞಾನ - 98 | ಲೆಕ್ಕಶಾಸ್ತ್ರ - 97 | ಗಣಕವಿಜ್ಞಾನ - 98 | ಗಣಕವಿಜ್ಞಾನ - 97 | ಅರ್ಥಶಾಸ್ತ್ರ - 94 | ಅರ್ಥಶಾಸ್ತ್ರ - 93 | ಇತಿಹಾಸ - 96 |
| ಅರ್ಥಶಾಸ್ತ್ರ - 97 | ಅರ್ಥಶಾಸ್ತ್ರ - 96 | ಅರ್ಥಶಾಸ್ತ್ರ - 96 | ಅರ್ಥಶಾಸ್ತ್ರ - 96 | ಲೆಕ್ಕಶಾಸ್ತ್ರ - 92 | ಗಣಕವಿಜ್ಞಾನ - 90 | ರಾಜ್ಯಶಾಸ್ತ್ರ - 94 |

ಪ್ರಸಕ್ತ ವರ್ಷದಲ್ಲಿ ವಿಶೇಷ ದರ್ಜೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿನಿಯರಿಗೆ ಮಹಿಳಾ ಸೇವಾ ಸಮಾಜದ ಆಡಳಿತ ಮಂಡಳಿ, ಪ್ರಾಚಾರ್ಯರು, ಉಪನ್ಯಾಸಕರು ಹಾಗೂ ಸಿಬ್ಬಂದಿ ವರ್ಗದವರ ಹಾರ್ದಿಕ ಶುಭಾಶಯಗಳು.




**2023-24ನೇ ಸಾಲಿನ ಶೈಕ್ಷಣಿಕ ವರ್ಷದ ಪ್ರಥಮ ಪಿಯುಸಿ ಕಲಾ ಮತ್ತು ವಾಣಿಜ್ಯ ತರಗತಿಗಳಿಗೆ ಪ್ರವೇಶ ಪ್ರಕಟಣೆ**

**ಸಂಯೋಜನೆಗಳು :**

1) ಕಲಾ ವಿಭಾಗ : ಇತಿಹಾಸ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಶಿಕ್ಷಣ ಶಾಸ್ತ್ರ (HEPE)
2) ವಾಣಿಜ್ಯ ವಿಭಾಗ : ಅರ್ಥಶಾಸ್ತ್ರ ವ್ಯವಹಾರ ಅಧ್ಯಯನ, ಲೆಕ್ಕಶಾಸ್ತ್ರ, ಕಂಪ್ಯೂಟರ್ ವಿಜ್ಞಾನ (ABEC)
ವಿಷಯ ಸಂಯೋಜನೆಗಳು : ಭಾಗ - 1 : ಕನ್ನಡ, ಇಂಗ್ಲಿಷ್, ಭಾಗ-2 : ಐಚ್ಛಿಕ ವಿಷಯಗಳು

**ಕಾಲೇಜಿನ ವೈಶಿಷ್ಟತೆ :**

❖ ಕಡಿಮ ಶುಲ್ಕದಲ್ಲಿ ಗುಣಮಟ್ಟದ ಶಿಕ್ಷಣ ❖ ಕಾಲೇಜು ನಗರದ ಮಧ್ಯ ಭಾಗದಲ್ಲಿದ್ದು, ಸುತ್ತಮುತ್ತ ಗ್ರಾಮೀಣ ಪ್ರದೇಶಗಳಿಂದ ಬರುವ ವಿದ್ಯಾರ್ಥಿಗಳಿಗೆ ಬಸ್ ನಿಲ್ದಾಣ ಹಾಗೂ ರೈಲ್ವೇ ನಿಲ್ದಾಣಗಳಿಗೆ ಹತ್ತಿರದಲ್ಲಿರುತ್ತದೆ.
❖ ಸಾಂಸ್ಕೃತಿಕ ಬೆಳವಣಿಗೆ, ಕ್ರೀಡಾ ಚಟುವಟಿಕೆಗಳಿಗೆ ಪ್ರೋತ್ಸಾಹ ಹಾಗೂ ವ್ಯಕ್ತಿತ್ವ ವಿಕಸನಕ್ಕೆ ಪ್ರೋತ್ಸಾಹ.
❖ ಅನುಭವಿ ಉಪನ್ಯಾಸಕರಿಂದ ನಿಸ್ವಾರ್ಥ ಸೇವೆ ಹಾಗೂ ಆಡಳಿತ ಮಂಡಳಿಯವರ ಪ್ರೋತ್ಸಾಹ
❖ ಸುಸಜ್ಜಿತ ವಾಚನಾಲಯ, ಗಣಕಯಂತ್ರ ಪ್ರಯೋಗಾಲಯ ಹಾಗೂ ಸುರಕ್ಷಿತ ಕ್ಯಾಂಪಸ್
❖ ಪ್ರತಿ ವಿದ್ಯಾರ್ಥಿನಿಯರಿಗೂ ವೈಯಕ್ತಿಕ ಗಮನ ಹಾಗೂ ಕಲಿಕೆಗೆ ಪ್ರೋತ್ಸಾಹ.
❖ ಪರಿಹಾರ ಬೋಧನಾ ತರಗತಿಗಳು ❖ ಪ್ರತಿ ತಿಂಗಳು ಕಿರು ಪರೀಕ್ಷೆಗಳು ❖ ವಿಶಾಲವಾದ ಕಟ್ಟಡ, ಮೌಲ್ಯಯುತ ಶಿಕ್ಷಣ
❖ ಪ್ರತಿ ತಿಂಗಳು ಪೋಷಕರ ಸಭೆಯಲ್ಲಿ ವಿದ್ಯಾರ್ಥಿಗಳ ಪ್ರಗತಿಯನ್ನು ತಿಳಿಸುವುದು.

ಕಡಿಮೆ ಶುಲ್ಕದಲ್ಲಿ ಉತ್ತಮ ಗುಣಮಟ್ಟದ ಶಿಕ್ಷಣ

ಪ್ರವೇಶದ ಅರ್ಜಿಗಳನ್ನು ಬೆಳಿಗ್ಗೆ 10.30 ರಿಂದ 2.00 ಗಂಟೆಯವರೆಗೆ ವಿತರಿಸಲಾಗುವದು.

ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ. ದೂರವಾಣಿ ಸಂಖ್ಯೆ : 08192 - 233010
ಮೊಬೈಲ್ ಸಂಖ್ಯೆ : 99804 32468, 87921 81964, E-mail ID : chinnammacollege@gmail.com

ಶ್ರೀಮತಿ ಕೆ.ಕೆ. ಸುಶೀಲಮ್ಮ, ಅಧ್ಯಕ್ಷರು | ಶ್ರೀಮತಿ ಜಯ್ಯಮ್ಮ ನೀಲಗುಂದ, ಕಾರ್ಯದರ್ಶಿ | ಶ್ರೀ ರವಿಕುಮಾರ್ ಹೆಚ್.ಎಸ್., ಪ್ರಾಚಾರ್ಯರು

# ಶಾಸಕನಾಗಲು ಕಾವಿ ಅಡ್ಡಿ ಇತ್ತು : ಹರೀಶ್



ಹರಿಹರ, ಮೇ 16 - ನಮ್ಮ ಪಕ್ಷವು ಕಾವಿಗೆ ಹಾಗೂ ಮಠ ಮಾನ್ಯಗಳಿಗೆ ಹೆಚ್ಚು ಮಾನ್ಯತೆಯನ್ನು ಕೊಡುತ್ತದೆ.

ಆದರೆ ನಾನು ಶಾಸಕನಾಗುವುದಕ್ಕೆ ನನಗೆ ಕಾವಿ ತೊಟ್ಟಂತಹ ಸ್ವಾಮಿಗಳು ಅಡ್ಡವಾಗಿದ್ದರು. ಆದರೆ ನನಗೆ ದೈವ ಕೈ ಹಿಡಿಯಿತು ಎಂದು ಶಾಸಕ ಬಿ.ಪಿ. ಹರೀಶ್ ಹೇಳಿದರು.

ನಗರದ ಶಿವಮೊಗ್ಗ ರಸ್ತೆಯ ಸಿದ್ದೇಶ್ವರ್ ಪ್ಯಾಲೇಸ್ ಸಭಾಂಗಣದಲ್ಲಿ ಮುಖಂಡರಿಗೆ ಕಾರ್ಯಕರ್ತರಿಗೆ ಅಭಿನಂದನಾ ಸಮಾರಂಭದಲ್ಲಿ ಅವರು ಮಾತನಾಡಿದರು.

ರಾಜ್ಯದಲ್ಲಿ ಸಿದ್ದರಾಮಯ್ಯ ಮುಖ್ಯಮಂತ್ರಿ ಆದರೆ ಕನಕ ಪೀಠದ ಸ್ವಾಮೀಜಿಯವರನ್ನು, ಲಿಂಗಾಯತರು ಮುಖ್ಯಮಂತ್ರಿ ಆದರೆ ಪಂಚಮಸಾಲಿ ಸ್ವಾಮಿಜಿಯವರನ್ನು, ಇತರೆ ಸಮಾಜದವರು ಮುಖ್ಯಮಂತ್ರಿ ಆದರೆ ವಾಲ್ಮೀಕಿ ಪೀಠದ ಶ್ರೀಗಳು, ರಡ್ಡಿ ವೇಮನ ಶ್ರೀಗಳು ಮತ್ತು ನಂದಿಗುಡಿ ಮಠದ ಶ್ರೀಗಳ ಪಾದಕ್ಕೆ ಅಭಿವೃದ್ಧಿ ಕಾರ್ಯಗಳನ್ನು ಅರ್ಪಿಸಿ ಅವರನ್ನು ವಿಧಾನಸಭೆಗೆ ಕರೆದುಕೊಂಡು ಹೋಗಿ ಅನುದಾನವನ್ನು ತಂದು ಅಭಿವೃದ್ಧಿ ಕಾರ್ಯಗಳನ್ನು ಮಾಡುವುದಾಗಿ ಹರೀಶ್ ಹೇಳಿದರು.

ನನಗೆ ಹಿಂದೆ ದೇವೇಂದ್ರಪ್ಪ ಅಡ್ಡಿ ಪಡಿಸಿದರು. ಆದರೆ ಈ ಬಾರಿ ಕಾವಿ ನನಗೆ ತುಂಬಾ ಅಡ್ಡಲಾಗಿ ನಿಂತಿತು. ಆದರೆ ಹರೀಶ್ ಅಂದರೆ ಬಿಜೆಪಿ, ಬಿಜೆಪಿ ಪಕ್ಷ ಅಂದರೆ ಹರೀಶ್ ಎಂದು ಹರೀಶ್ ಅವರಿಗೆ ಮಾತ್ರ ಟಿಕೆಟ್ ಕೊಡಿ ಎಂದು ಒಂದು ವಾತಾವರಣವನ್ನು ಸೃಷ್ಟಿ ಮಾಡಿದ ಪರಿಣಾಮ ಕಾವಿ ಕೈಯಲ್ಲಿ ಏನೂ ಮಾಡಿಕೊಳ್ಳಲು ಆಗಲಿಲ್ಲ. ಆ ಸಮಯದಲ್ಲಿ ದೈವ ನನ್ನ ಕೈ ಬಿಡಲಿಲ್ಲ . ಇದರಿಂದಾಗಿ ನಾನು ಕ್ಷೇತ್ರದ ಶಾಸಕನಾಗಲು ಸಾಧ್ಯವಾಯಿತು ಎಂದರು.

# ಪ್ರಾಕೃತಿಕ ವಿಕೋಪ ಎದುರಿಸಲು ಸಿದ್ಧರಾಗಿರಿ : ಡಿಸಿ



ದಾವಣಗೆರೆ, ಮೇ 16- ಜಿಲ್ಲೆಯಲ್ಲಿ ಪ್ರಸಕ್ತ ಮುಂಗಾರು ಮಳೆಯ ಸಮಯದಲ್ಲಿ ಪ್ರಾಕೃತಿಕ ವಿಕೋಪಗಳಿಂದ ಮಾನವ ಜೀವ ಹಾನಿ, ಜಾನುವಾರು ಹಾಗೂ ಆಸ್ತಿ ಹಾನಿಗಳನ್ನು ತಡೆಯಲು ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಮತ್ತು ವಿಕೋಪ ಸಂಭವಿಸಿದ ಸಮಯದಲ್ಲಿ ಸಾರ್ವಜನಿಕರ ರಕ್ಷಣೆಗೆ ತುರ್ತಾಗಿ ಸ್ಪಂದಿಸುವಂತೆ ಎಲ್ಲಾ ಇಲಾಖೆಗಳ ಅಧಿಕಾರಿಗಳು ಸನ್ನದ್ಧವಾಗಿರ ಬೇಕು ಎಂದು ಜಿಲ್ಲಾಧಿಕಾರಿ ಶಿವಾನಂದ ಕಾಪಶಿ ತಿಳಿಸಿದರು.

ಮುಂಗಾರು ಮಳೆ ಮುಂಜಾಗ್ರತೆ ಕ್ರಮಗಳ ಕುರಿತಂತೆ ಮಂಗಳವಾರ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆದ ಜಿಲ್ಲಾ ವಿಪತ್ತು ನಿರ್ವಹಣಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕಳೆದ ವರ್ಷ ಹೆಚ್ಚು ಮಳೆ ಸುರಿದ ಸಂದ ರ್ಭದಲ್ಲಿ ಉಂಟಾದ ತೊಂದರೆಗಳು, ತಗ್ಗು ಪ್ರದೇಶಗಳಲ್ಲಿ ನೀರು ನುಗ್ಗಿ ಸಾರ್ವಜನಿಕರು ಕಷ್ಟ ಅನುಭವಿಸಿರುವ ಪ್ರಕರಣಗಳನ್ನು ಗಮನದಲ್ಲಿಸಿರಿಕೊಂಡು ಅಂತಹ ಪ್ರದೇಶಗಳನ್ನು ಗುರುತಿಸಬೇಕು. ಈ ಬಾರಿಯ ಮಳೆಗಾಲದಲ್ಲಿ ಸಾರ್ವಜನಿಕರು ಅಂತಹ ತೊಂದರೆಗಳನ್ನು ಅನುಭವಿಸದಂತೆ ಅಗತ್ಯ ಮುನ್ನಚ್ಚರಿಕೆ ವಹಿಸಬೇಕು.

ಜಿಲ್ಲೆಯ ಬಹುತೇಕ ಗ್ರಾಮಗಳ ಮಧ್ಯ ಭಾಗದಲ್ಲಿ ಕೆರೆಕಟ್ಟೆಗಳು,ಹೊಂಡ,ಕಾಲುವೆಗಳುನಿರ್ಮಾಣವಾಗಿರುವುದರಿಂದ ರಾತ್ರೋ ರಾತ್ರಿ ಹೆಚ್ಚು ಮಳೆಯಾದರೆ ಮನೆ ಗಳಿಗೆ ನೀರು ನುಗ್ಗಿ ಹೆಚ್ಚು ತೊಂದರೆ ಉಂಟಾ ಗುತ್ತದೆ, ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಮುಂಗಾರು ಪ್ರಾರಂಭವಾಗು ವುದಕ್ಕಿಂತ ಮುಂಚೆ ಪರಿಶೀಲಿಸಬೇಕು ಎಂದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸುರೇಶ್ ಹಿಟ್ನಾಳ್, ವಿವಿಧ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

# ರೋಜ್‌ಗಾರ್ ಮೇಳ ಉದ್ಘಾಟನೆ

ಬೆಂಗಳೂರು, ಮೇ 16 - ದೇಶದಲ್ಲಿ ಏಕಕಾಲಕ್ಕೆ 71,000 ಯುವಕ/ಯುವತಿಯರಿಗೆ ಉದ್ಯೋಗ ಕಲ್ಪಿಸುವ ಬೃಹತ್ ಯೋಜನೆ ರೋಜ್‌ಗಾರ್ ಮೇಳದ ಐದನೇ ಆವೃತ್ತಿಯನ್ನು ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಉದ್ಘಾಟಿಸಿದರು.

ನಗರದಲ್ಲಿಂದು ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆ ರೋಜ್‌ಗಾರ್ ಮೇಳದ ಐದನೇ ಆವೃತ್ತಿ ಉದ್ಘಾಟಿಸಿದ ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ, ಈವರೆಗೆ ಒಟ್ಟು 3.6 ಲಕ್ಷ ಜನರಿಗೆ ಉದ್ಯೋಗ ನೇಮಕಾತಿ ಮಾಡುವ ಮೂಲಕ, ನಿರುದ್ಯೋಗ ಸಮಸ್ಯೆಯನ್ನು ನಿವಾರಿಸಲು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಮಾರ್ಗದರ್ಶನದಲ್ಲಿ ನಮ್ಮ ಕೇಂದ್ರ ಸರ್ಕಾರ ಮಹತ್ತರವಾದ ಹೆಜ್ಜೆ ಇಟ್ಟಿದೆ ಎಂದರು. ಸರ್ಕಾರಿ ಇಲಾಖೆಗಳಲ್ಲಿ ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡಿ, ಇಲಾಖೆಗಳು ಉತ್ತಮವಾಗಿ ಕಾರ್ಯ ನಿರ್ವಹಿಸುವಂತೆ ಮಾಡಲು ಈ ಯೋಜನೆ ಸಹಕಾರಿಯಾಗಿದೆ ಮತ್ತು ಯುವ ಪೀಳಿಗೆಗೆ ಉದ್ಯೋಗ ಅವಕಾಶ ಕೂಡ ನೀಡಿದಂತಾಗಿದೆ ಎಂದರು.

# ಕಟೀಲ್ ಬದಲಿಸಲು ಜೋಶಿ ಇಂಗಿತ

ಬೆಂಗಳೂರು, ಮೇ 16 – ಬಿಜೆಪಿ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರ 3 ವರ್ಷಗಳ ಅವಧಿ ಮುಗಿದಿರುವುದರಿಂದ ಅವರನ್ನು ಬದಲಿಸ ಲಾಗುವುದು ಎಂದು ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಇಂಗಿತ ವ್ಯಕ್ತಪಡಿಸಿದ್ದಾರೆ.

ಕಟೀಲ್ ಅವರ ಅವಧಿ ಮುಗಿದಿದೆ. ವಿಧಾನಸಭಾ ಚುನಾವಣೆಯ ಜವಾಬ್ದಾರಿಯನ್ನು ರಾಷ್ಟ್ರೀಯ ನಾಯಕರು ಅವರಿಗೆ ವಹಿಸಿದ್ದರು. ನಮ್ಮ ನಾಯಕರು ಮುಂದಿನ ನಿರ್ಧಾರ ತೆಗೆದುಕೊಳ್ಳಲಿದ್ದಾರೆ ಎಂದವರು ಹೇಳಿದರು.

# ಸೋಲು ಪರಾಮರ್ಶಿಸಿದ್ದೇವೆ : ಬೊಮ್ಮಾಯಿ

ಬೆಂಗಳೂರು, ಮೇ 16 - ಚುನಾವಣೆಯ ಸೋಲು ಏಕೆ ಆಯಿತು? ಏನಾಯಿತು? ಎಂದು ನಾವು ಪರಾಮರ್ಶೆ ಮಾಡಿದ್ದೇವೆ ಎಂದು ಹಂಗಾಮಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಮ್ಮ ಜೊತೆ ಕೆಲಸ ಮಾಡಿದವರು ಅಲ್ಪ ಪ್ರಮಾಣದಲ್ಲಿ ಸೋತಿದ್ದಾರೆ. ಧೈರ್ಯ ತುಂಬುವ ಕೆಲಸ ಮಾಡುತ್ತಿದ್ದೇನೆ. ಸೋಲಿನ ಕಾರಣದ ಬಗ್ಗೆ ಚರ್ಚೆ ಮಾಡಿದ್ದೇವೆ ಎಂದರು.

ಕಾಂಗ್ರೆಸ್‌ನಲ್ಲಿ ಸ್ಥಾನ ಹಗ್ಗಜಗ್ಗಾಟ ವಿಚಾರಕ್ಕೆ ಸಂಬಂಧಿಸಿದಂತೆ ಮಾತನಾಡಿ, ಅದು ಅವರ ಪಕ್ಷದ ವಿಚಾರ. ಮುಖ್ಯಮಂತ್ರಿ ಯಾರು ಆಗುತ್ತಾರೆ ಎನ್ನುವುದನ್ನು ಕಾಯ್ದು ನೋಡೋಣ ಎಂದರು.

# ಜಾಲತಾಣಗಳಲ್ಲಿ ಕಾಂಗ್ರೆಸ್ 'ಗ್ಯಾರಂಟಿ' ಚರ್ಚೆ

ದಾವಣಗೆರೆ, ಮೇ 16- ರಾಜ್ಯದಲ್ಲಿ ವಿಧಾನಸಭಾ ಚುನಾವಣೆ ಮುಗಿಯಿತು. ನಿರೀಕ್ಷೆಗೂ ಮೀರಿ ಕಾಂಗ್ರೆಸ್ ಬಹುಮತ ಪಡೆದಿದೆ. ಇನ್ನೇನು ನೂತನ ಸರ್ಕಾರ ರಚನೆಗೆ ಕ್ಷಣಗಣನೆ ಆರಂಭವಾಗಿದೆ.

ಅತ್ತ ಮುಖ್ಯಮಂತ್ರಿಯಾಗಲು ಮುಖಂಡರು ಕಸರತ್ತು ನಡೆಸುತ್ತಿದ್ದಾರೆ. ಸಚಿವ ಸ್ಥಾನಗಳಿಗೆ ಲಾಭಿ ನಡೆಯುತ್ತಿದ್ದರೆ ಇತ್ತ ಕಾಂಗ್ರೆಸ್ ಸರ್ಕಾರದ ಗ್ಯಾರಂಟಿಯದ್ದೇ ಚರ್ಚೆ ಹೆಚ್ಚಾಗಿದೆ.

ಕಾಂಗ್ರೆಸ್‌ಗೆ ಮತ ನೀಡಿದವರು ಖುಷಿಯಾಗಿದ್ದಾರೆ. ಗ್ಯಾರಂಟಿ ಸೌಲಭ್ಯಗಳಿಗಾಗಿ ಕಾಯುತ್ತಿದ್ದಾರೆ. ಬಿಜೆಪಿಗೆ ಮತ ನೀಡಿದವರು 'ನೋಡೋಣ ಅದೇನು ಮಾಡುತ್ತಾರೋ?' ಎಂದು ಕಾದು ನೋಡುವುದರಲ್ಲಿದ್ದಾರೆ.

ಚುನಾವಣೆಗೂ ಮುನ್ನ ಸಿದ್ಧರಾಮಯ್ಯ ಹಾಗೂ ಡಿ.ಕೆ. ಶಿವಕುಮಾರ್ ಅವರುಗಳು ಪ್ರಚಾರ ಸಭೆಗಳಲ್ಲಿ ಕಾಂಗ್ರೆಸ್ ಗ್ಯಾರಂಟಿ ಕಾರ್ಡ್ ಬಗ್ಗೆ ಪ್ರಸ್ತಾಪಿಸುತ್ತಾ, 200 ಯೂನಿಟ್ ವಿದ್ಯುತ್ ಉಚಿತ ನೀಡುವ ಬಗ್ಗೆ, ಮಹಿಳೆಯರಿಗೆ ಉಚಿತ ಬಸ್ ಸೌಲಭ್ಯ ಕಲ್ಪಿಸುವುದು ಸೇರಿದಂತೆ ಕೊಡುಗೆಗಳ ಬಗ್ಗೆ ಆಡಿರುವ ವೀಡಿಯೋಗಳು ಹೆಚ್ಚಾಗಿಯೇ ವೈರಲ್ ಆಗುತ್ತಿವೆ.

ಅದರಲ್ಲೂ 'ಎಲ್ಲರಿಗೂ ಉಚಿತ ವಿದ್ಯುತ್' ಎಂದು ಹೇಳಿರುವ ಸಿದ್ದರಾಮಯ್ಯ ಅವರ ವಿಡಿಯೋವನ್ನು ನೆನಪಿಟ್ಟುಕೊಳ್ಳಿ ಎಲ್ಲರಿಗೂ ಉಚಿತ ಎಂದು ಹೇಳಲಾಗಿದೆ ಎಂಬ ಶೀರ್ಷಿಕೆಯಡಿ ಹರಿದಾಡುತ್ತಿದೆ. ಜೊತೆಗೆ ವಾಟ್ಸಾಪ್ ಸ್ಟೇಟಸ್‌ಗಳನ್ನಾಗಿಯೂ ಮಾಡಕೊಳ್ಳಲಾಗುತ್ತಿದೆ.




ಇನ್ನು 'ನಮಗೂ ಉಚಿತ ವಿದ್ಯುತ್ ಭಾಗ್ಯ ಸಿಗುತ್ತಾ?' ಎಂದು ತಮ್ಮ ಹಳೆಯ ಕರೆಂಟ್ ಬಿಲ್ಲುಗಳತ್ತ ಕೆಲವರು ಕಣ್ಣಾಡಿಸಲಾರಂಭಿಸಿದ್ದರೆ. ನಮ್ಮದು 200 ಯೂನಿಟ್ ದಾಟುತ್ತದೆ. ನಮಗೆ ಉಚಿತ ಸಿಗುವುದಿಲ್ಲ ಎಂದು ನಿರಾಸೆ ವ್ಯಕ್ತಪಡಿಸುವವರೂ ಇದ್ದಾರೆ.

ಕೆಲವೆಡೆ ವಿದ್ಯುತ್ ಬಿಲ್ ಕಟ್ಟುವುದಿಲ್ಲ ಎಂದು ಹೇಳಿರುವ ವಿಡಿಯೋಗಳು, ಸುದ್ದಿಗಳು ಅತಿ ವೇಗದಲ್ಲಿ ಹರಿದಾಡುತ್ತಿವೆ. 'ಸರ್ಕಾರ ರಚನೆಯಾಗಬೇಕು. ವಿದ್ಯುತ್ ಕಂಪನಿಗಳಿಗೆ ಆದೇಶ ನೀಡಬೇಕು. ಆನಂತರವಷ್ಟೇ ಉಚಿತದ ಮಾತು' ಎಂದು ಹೇಳುವವರ ನಡುವೆಯೂ, ಜನರು ವಿದ್ಯುತ್ ಬಿಲ್ ಕಟ್ಟಲು ಹಿಂದೇಟು ಹಾಕುತ್ತಿದ್ದಾರೆ. ಸದ್ಯ ಬಿಲ್ ಕೌಂಟರ್‌ಗಳತ್ತ ಜನದಟ್ಟಣೆ ಕಡಿಮೆ ಇರುವುದಂತೂ ಸತ್ಯ.

ಮಹಿಳೆಯರಿಗೆ ಉಚಿತ ಬಸ್ ಪಾಸ್ ಸೌಲಭ್ಯ ಕುರಿತಂತೆಯೂ ಹೆಚ್ಚಾಗಿ ಚರ್ಚೆಗಳು ನಡೆಯುತ್ತಿವೆ. ಬಸ್ ಚಾರ್ಜ್ ಇಲ್ಲದಿದ್ದರೆ ಯಾವಾಗ ಯಾವ ಊರಿಗೆ ಹೋಗಿ ಬರಬಹುದೆಂಬುದು ಗೃಹಿಣಿಯರ ಲೆಕ್ಕಾಚಾರವಾದರೆ, ಕಾಲೇಜಿಗೆ ಹೋಗಿ ಬರಲು ಹಣ ಕೇಳುವ ತಾಪತ್ರಯ ತಪ್ಪಿತಲ್ಲ ಎಂಬುದು ವಿದ್ಯಾರ್ಥಿನಿಯರಿಗೆ ಸಮಾಧಾನ.

ಉಚಿತ ಬಸ್ ಚಾರ್ಜ್ ಕುರಿತ ಜೋಕ್‌ಗಳಿಗೂ ಕಡಿಮೆ ಇಲ್ಲ. 'ತವರಿಗೆ ಹೋಗಿ ಬರಲು ಮಹಿಳೆಯರು ಉತ್ಸುಕರಾಗಿದ್ದಾರೋ ಇಲ್ಲವೋ ಗೊತ್ತಿಲ್ಲ. ಆದರೆ ಕಳುಹಿಸಲು ಪುರುಷರಂತೂ ಉತ್ಸುಕರಾಗಿದ್ದಾರೆ' 'ಹೆಂಡತಿಯೊಂದಿಗೆ ಜಗಳವಾಡಲು ಹತ್ತು ಬಾರಿ ಯೋಚಿಸಿ, ಯಾವಾಗ ಬೇಕಾದರೂ ತವರಿಗೆ ಹೋಗಬಹುದು ಬಸ್ ಚಾರ್ಜ್ ಇಲ್ಲ' ಎಂಬಿತ್ಯಾದಿ ಜೋಕ್‌ಗಳು ಹರಿದಾಡಲಾರಂಭಿಸಿವೆ.

'ಬೆಚ್ಚನೆ ಮನೆ, ಪುಕ್ಕಟೆ ಕರೆಂಟ್ ಇರಲು, ವೆಚ್ಚಕ್ಕೆ 2 ಸಾವಿರ ರೂ. ಕೊಡುತ್ತಿರಲು, ಉದ್ಯೋಗ ಮಾಡದೇ ಸಿಗುವ ಭರಪೂರ ಭತ್ಯೆ ಇರಲು.. ಇಚ್ಛೆಯನ್ನರಿತು 10 ಕೆ.ಜಿ. ಅಕ್ಕಿ ಕೊಡುವ ಸರ್ಕಾರವಿರಲು ಸ್ವರ್ಗಕ್ಕೆ ಕಿಚ್ಚು ಹಚ್ಚೆಂದ ಬಿಪಿಎಲ್ ಕಾರ್ಡ್ ಮತದಾರ' ಎಂಬ ಜೋಕ್ ಸಹ ಹೆಚ್ಚಾಗಿ ಹರಿದಾಡುತ್ತಿದೆ.

ಗ್ಯಾರಂಟಿ ಕೊಡುಗೆಗಳ ಬಗ್ಗೆ ಬಿಜೆಪಿಯವರು ಲೇವಡಿ ಮಾಡಲಾರಂಭಿಸಿದ್ದರೆ, ಸ್ವಾಭಿಮಾನಿಗಳಾಗಿದ್ದರೆ 'ಭಕ್ತರು ಉಚಿತ ಭಾಗ್ಯ ಪಡೆದುಕೊಳ್ಳಬಾರದು' ಎಲ್ಲರಿಗಿಂತ ಮುಂಚಿತವಾಗಿ ಭಕ್ತರೇ (ಮೋದಿ ಅಭಿಮಾನಿಗಳು ಅಥವಾ ಬಿಜೆಪಿ ಕಾರ್ಯಕರ್ತರು) ಉಚಿತ ಭಾಗ್ಯ ಪಡೆಯಲು ಮುಂದಿರುತ್ತಾರೆ ಎಂದು ಕಾಂಗ್ರೆಸ್ ಕಾರ್ಯಕರ್ತರು ಕಿಚಾಯಿಸುತ್ತಿದ್ದಾರೆ.

ಒಟ್ಟಿನಲ್ಲಿ ಕಳೆದೆಲ್ಲಾ ಚುನಾವಣೆಗಳಿಗಿಂತ ಈ ಬಾರಿಯ ಚುನಾವಣೆಯಲ್ಲಿ ಕಾಂಗ್ರೆಸ್ ಘೋಷಿಸಿರುವ ಕೊಡುಗೆಗಳು ಗೆಲುವಿನಲ್ಲಿ ಮಹತ್ವದ ಪಾತ್ರ ವಹಿಸಿವೆ ಎನ್ನಲಾಗುತ್ತಿದೆ. ಜೊತೆಗೆ ಗೆದ್ದ ನಂತರವೂ ಹೆಚ್ಚು ಪ್ರಚಾರ ತೆಗೆದುಕೊಳ್ಳುತ್ತಿವೆ.


## ಹಾರ್ದಿಕ ಅಭಿನಂದನೆಗಳು



ಲಿಂ|| ಶ್ರೀ ಎ. ರುದ್ರಪ್ಪನವರು (Rtd. AEE, PWD)
ಮತ್ತು ಶ್ರೀಮತಿ ಎ. ಜಯಮ್ಮನವರ ಮೊಮ್ಮಗಳಾದ
**ಕು|| ಅದಿತಿ ವೀರೇಶ್ ಅಂಗಡಿ** ಇವಳು
ICSE ಬೋರ್ಡ್ ಹತ್ತನೇ ತರಗತಿಯಲ್ಲಿ
ಶೇ. **98.83%** ಅಂಕಗಳನ್ನು ಪಡೆದು
ಜಿಲ್ಲೆಗೆ '**ಪ್ರಥಮ ಸ್ಥಾನ**' ಪಡೆದು ಉತ್ತೀರ್ಣರಾಗಿರುತ್ತಾರೆ.

ಇವರ ಭವಿಷ್ಯ ಇನ್ನೂ ಉಜ್ವಲವಾಗಲೆಂದು ಶುಭ ಹಾರೈಸುವವರು :

ಶ್ರೀಮತಿ ಎ.ಜಯಮ್ಮ, ಲಿಂ. ಶ್ರೀ ಎ. ರುದ್ರಪ್ಪ (Rtd. AEE, PWD)
ಡಾ. ಎ.ಆರ್. ವೀರೇಶ್, ಕಿವಿ, ಮೂಗು, ಗಂಟಲು ತಜ್ಞರು
ಡಾ. ಎ.ಆರ್. ವಾಗೀಶ್, ಕಣ್ಣಿನ ಸೂಪರ್ ಸ್ಪೆಷಾಲಿಟಿ ಕೇರ್ ಆಸ್ಪತ್ರೆ
ಡಾ. ಪ್ರಿಯದರ್ಶಿನಿ, ಡಾ. ತೃಪ್ತಿ ಮತ್ತು ಬಂಧು ಮಿತ್ರರು.
3ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ ಸಿಬ್ಬಂದಿ ವರ್ಗ



Sri Manasa Education Association (R)

## OXFORD ENGLISH MEDIUM HIGH SCHOOL

RMC Road, Anekonda, Davangere - 577001

## 2022-23 SSLC TOPPERS

* Congratulations to All our Raising Stars *




Best wishes From : Sri Manasa Education Association All Members and Oxford English Medium Pre Primary, Primary, Higher Primary & High School Teaching Staff & Non Taching Staff